ದೆಹಲಿ ಕರ್ನಾಟಕ ಸಂಘದ

# ಅಭಿಮತ

ಅಗಸ್ಟ್ 2018
ಬೆಲೆ ರೂ. 1



## ರಸ ಭಾವಗಳಿಂದ ಮೇಳೈಸಿದ ಶಾಸ್ತ್ರೀಯ ನೃತ್ಯಗಳು

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 11
ಅಗಸ್ಟ್ 2018, ಬೆಲೆ ರೂ. 1

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ನೇರ ಮಾತು

ಯಾವುದೇ ಸಂಘ ಸಂಸ್ಥೆಗಳು ಯಶಸ್ವಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬೆಳೆಯಬೇಕಾದರೆ, ಕೇವಲ ಆರ್ಥಿಕ ಬಲವಿದ್ದರೆ ಸಾಕಾಗುವುದಿಲ್ಲ ಸಂಘಟನಾಶಕ್ತಿಯನ್ನು ಹೊಂದಿರುವ ಆಡಳಿತ ಮಂಡಳಿಯ ಜೊತೆಗೆ ನಿಸ್ವಾರ್ಥವಾಗಿ ದುಡಿಯಬಲ್ಲ ಸ್ವಯಂಸೇವಕರ ತಂಡ ಅತೀ ಮುಖ್ಯ. ಹಿಂದೆ ಸಕ್ರೀಯವಾಗಿದ್ದ ಗುರ್‌ಗಾಂವ್ ಕನ್ನಡ ಸಂಘಕ್ಕೆ ಮರುಜೀವ ನೀಡಲು ಸುಮಾರು ಹದಿನೈದು ವರ್ಷಗಳ ಹಿಂದೆ ನಾವು ಗುರ್‌ಗಾಂವ್‌ನಲ್ಲಿ ಕನ್ನಡಿಗರನ್ನು ಒಟ್ಟು ಮಾಡಿದೆವು. ಆಗ ಅತ್ಯಂತ ಪ್ರಾಮಾಣಿಕವಾಗಿ ಮತ್ತು ಪ್ರೀತಿಯಿಂದ ಸಹಕಾರ ನೀಡಿದ ಪ್ರಮುಖರಲ್ಲಿ ದಿ. ಶ್ರೀಮತಿ ಜಯಶ್ರೀ, ಶ್ರೀ ಪ್ರಸನ್ನ ಬಂಟ್ವಾಳ್, ಶ್ರೀ ರಾಜಶೇಖರ್ ಭಟ್, ಶ್ರೀ ಸಾಯಿರಾಮ್, ಶ್ರೀ ವಸಂತ ಕುಮಾರ್ ಮೊದಲಾದವರು. ನಾವು ಒಬ್ಬರಿಂದ ಇನ್ನೊಬ್ಬರಿಗೆ ದೂರವಾಣಿ ಮೂಲಕ ಸಂಪರ್ಕಿಸುತ್ತಾ ಸುಮಾರು ನೂರಕ್ಕೂ ಮಿಕ್ಕಿ ಸದಸ್ಯರನ್ನು ಒಂದು ಕಡೆ ಸೇರಿಸಲು ಸಾಧ್ಯವಾಯಿತು. ಆಗ ಅದಕ್ಕೆ ಪೂರಕವಾಗಿ ಸ್ಪಂದಿಸಿ ತಮ್ಮ ಕಚೇರಿಯ ಮೇಲ್ಛಾವಣಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ಸಹಕಾರ ನೀಡಿದವರು ಡಾ. ಪುರುಷೋತ್ತಮ ಬಿಳಿಮಲೆಯವರು.

ಅಂದಿನಿಂದ ಇಂದಿನವರೆಗೆ ಗುರ್‌ಗಾಂವ್ ಕನ್ನಡ ಸಂಘವು ಅತ್ಯಂತ ಸಕ್ರಿಯವಾಗಿ ಹಲವಾರು ಕಾರ್ಯಕ್ರಮಗಳನ್ನು ಪೂರ್ವನಿಯೋಜಿತ ವೇಳಾಪಟ್ಟಿಯೊಂದಿಗೆ ಮಾಡುತ್ತಲೇ ಬಂದಿದೆ. ಇಂದು ಅದು ಬೆಳೆದು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲೂ ಅತ್ಯಂತ ಸಕ್ರಿಯವಾಗಿರುವುದು ಗುರ್‌ಗಾಂವ್ ಕನ್ನಡ ಸಂಘದ ಬೆಳವಣಿಗೆಗೊಂದು ಸಾಕ್ಷಿ.

ಸರಿಸುಮಾರಾಗಿ ನಾನು ಹೋದಲ್ಲೆಲ್ಲಾ ನನ್ನ ಭಾಷಣದಲ್ಲಿ ಮತ್ತು ಪರಸ್ಪರ ಮಾತಿನಲ್ಲಿ ಗುರ್‌ಗಾಂವ್ ಕನ್ನಡ ಸಂಘದ ಬಗ್ಗೆ ಉಲ್ಲೇಖ ಮಾಡುತ್ತಲೇ ಇರುತ್ತೇನೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಲ್ಲಿ ನಾವು ಹಮ್ಮಿಕೊಂಡ ಕನ್ನಡದ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಪಾಲ್ಗೊಳ್ಳುವ ಒಂದು ಯುವಪಡೆ ಮತ್ತು ಅದಕ್ಕೆ ಮಾರ್ಗದರ್ಶನ ನೀಡುವ ಒಂದು ಹಿರಿಯರ ಬಳಗ. ಹೀಗಾಗಿ ಎಲ್ಲಾ ಕನ್ನಡದ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಇಲ್ಲಿ ನಡೆಯುತ್ತವೆ. ಕನ್ನಡದ ಹಾಡುಗಳಿಗೆ ಎಲ್ಲಾ ಕನ್ನಡಿಗರು ಹೆಜ್ಜೆ ಹಾಕುತ್ತಾರೆ, ಚಪ್ಪಾಳೆ ಹೊಡೆಯುತ್ತಾರೆ. ಇದೀಗ ನಾನು ಈ ಸಂಘ ಆಯೋಜಿಸಿದ ಸಾಮೂಹಿಕ ಸತ್ಯನಾರಾಯಣ ಪೂಜೆಯಲ್ಲಿ ಪಾಲ್ಗೊಂಡಿದ್ದೆ. ಅಲ್ಲಿ ಅವರು ಬಂದವರನ್ನು ಮಾತನಾಡಿಸಿ, ಆತಿಥ್ಯ ನೀಡುವುದು ಒಂದು ಕಡೆಯಾದರೆ ಇನ್ನೊಂದು ಕಡೆ ಕಾರ್ಯಕ್ರಮದ ವ್ಯವಸ್ಥೆಗೆ ಒಂದು ತಂಡ ಕೆಲಸ ಮಾಡುತ್ತಿರುವುದು ಮತ್ತೊಂದು ಕಡೆ ಅತ್ಯಂತ ಮೆಚ್ಚುಗೆಯ ವ್ಯವಸ್ಥೆ ಎಂದರೆ ಇಲ್ಲಿನ ಯುವಕರೇ ಸೇರಿ ಬಂದವರಿಗೆ ಸ್ವತಃ ಅಡುಗೆ ಮಾಡಿ ಊಟದ ವ್ಯವಸ್ಥೆಯನ್ನು ಮಾಡುವುದು, ಪಾತ್ರೆ ತೊಳೆಯುವುದು, ತರಕಾರಿ ಹಚ್ಚುವುದು, ನೆಲ ಒರೆಸುವುದು, ಊಟದ ಮಾಡಿದ ನಂತರ ಎಲೆಗಳನ್ನು ತೆಗೆಯುವುದು ಈ ಎಲ್ಲದಕ್ಕೂ ಸಿದ್ದವಾಗಿದೆ ಈ ತಂಡ. ಮುಖ್ಯವಾಗಿ ಇಲ್ಲಿ ಮಹಿಳೆಯರಿಗೆ ಯಾವುದೇ ಕೆಲಸವನ್ನು ಕೊಡದೇ ಅವರು ಯಾವುದೇ ವ್ಯವಸ್ಥೆಯ ಕುರಿತು ಚಿಂತಿಸದೇ ಕಾರ್ಯಕ್ರಮಗಳನ್ನು ವೀಕ್ಷಿಸಿ, ಅದರಲ್ಲಿ ಪಾಲ್ಗೊಂಡು ಸಂತೋಷ ಪಡುವಂತೆ ಯುವಕರೆಲ್ಲರೂ ಮಾಡುತ್ತಿರುತ್ತಾರೆ.

ಈ ತಂಡದ ಯುವಕರು ಅತ್ಯಂತ ಪ್ರತಿಷ್ಠಿತ ಕಂಪೆನಿಗಳಲ್ಲಿ ಉತ್ತಮ ವೃತ್ತಿಗಳಲ್ಲಿ ಉನ್ನತ ಸ್ಥಾನದಲ್ಲಿರುವವರು. ಇಲ್ಲಿ ನಡೆಯುವ ಸತ್ಯ ನಾರಾಯಣ ಪೂಜೆಯಂತಹ ಕಾರ್ಯಕ್ರಮಗಳು ಒಂದು ಧಾರ್ಮಿಕ ಕಾರ್ಯಕ್ರಮವಾದರೂ, ಎಲ್ಲಾ ಭಿನ್ನತೆಗಳನ್ನು ಮರೆತು ಕನ್ನಡಿಗರೆಲ್ಲರೂ ಒಟ್ಟಾಗಿ ಕನ್ನಡವನ್ನು ಬೆಳೆಸುವ ಮತ್ತು ಕಟ್ಟುವ ಕಾಯಕವನ್ನು ಮಾಡುತ್ತಿದ್ದಾರೆ. ಇವರೆಲ್ಲರ ಅರ್ಪಣಾ ಭಾವ, ನಿಸ್ವಾರ್ಥ ಸೇವೆ ಮತ್ತು ಕನ್ನಡದ ಬಗ್ಗೆ ಇರುವ ಕಳಕಳಿ ಎಲ್ಲರಿಗೂ ಮಾದರಿ. ಬಹುಶಃ ಇಂತಹ ಕೆಲಸ ಮಾಡುವ ಒಂದು ಬಳಗ ಎಲ್ಲಾ ಸಂಘ ಸಂಸ್ಥೆಗಳಲ್ಲಿದ್ದರೆ ಅದು ಬೆಳೆದು ಗಟ್ಟಿಗೊಳ್ಳುವುದಕ್ಕೆ ಯಾವುದೇ ಸಂಶಯವಿಲ್ಲ.

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 011–26109615 / 26104818

## ಮುನ್ನೋಟ

ಆತ್ಮೀಯರೆ,

ಇದು ದೆಹಲಿ ಕರ್ನಾಟಕ ಸಂಘದ ಮಹತ್ತರ ಸಾಧನೆ ಎಂದು ಹೇಳಬಹುದು. ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕದ ಖ್ಯಾತ ವಿಜ್ಞಾನಿ ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಅವರ ಹೆಸರನ್ನು ಮೆಟ್ರೋ ನಿಲ್ದಾಣಕ್ಕೆ ಇಡಿಸುವುದು, ಅದು ಕೂಡಾ ನಮ್ಮ ದೆಹಲಿ ಕರ್ನಾಟಕ ಸಂಘದ ಪಕ್ಕದಲ್ಲಿರುವ ಮೆಟ್ರೋ ಸ್ಟೇಷನ್‌ಗೆ ಹೆಸರಿಡಿಸಿರುವುದು ವಿಶೇಷ. ಈ ಮೆಟ್ರೋ ನಿಲ್ದಾಣವು ಆಗಸ್ಟ್ ಆರರಂದು ಸಾರ್ವಜನಿಕರ ಓಡಾಟಕ್ಕಾಗಿ ಉದ್ಘಾಟನೆಯಾಗಿದೆ. ಇದು ಸಂಘದ ಶ್ರಮಕ್ಕೆ ಸಿಕ್ಕಿದ ಪ್ರತಿಫಲ ಎಂದು ಹೇಳಬಹುದು. ಕರ್ನಾಟಕದ ಭಾರತರತ್ನ 'ಸರ್.ಎಂ. ವಿಶ್ವೇಶ್ವರಯ್ಯ ಮೋತಿಭಾಗ್ ಮೆಟ್ರೋ ಸ್ಟೇಶನ್' ಎಂಬ ಹೆಸರು ದೆಹಲಿಯ ಕರ್ನಾಟಕ ಸಂಘದ ಪಕ್ಕದಲ್ಲಿ ಶಾಶ್ವತವಾಗಿ ಉಳಿಯಲಿದೆ. ಇದು ಸಾಕಾರಗೊಳ್ಳುವಲ್ಲಿ ಸಹಕಾರ ನೀಡಿದಂತಹ ಕೇಂದ್ರ ಸಚಿವರುಗಳಾದ ಶ್ರೀ ಅನಂತಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡ ಮತ್ತು ವಿಶೇಷವಾಗಿ ಶ್ರೀ ವೆಂಕಯ್ಯ ನಾಯ್ಡು ಅವರಿಗೆ ಅನಂತ ಕೋಟಿ ನಮನಗಳು. ಇನ್ನು ಮುಂದೆ ಸಂಘದ ಕಾರ್ಯಕ್ರಮಗಳಿಗೆ ದೆಹಲಿ ಮತ್ತು ಎನ್.ಸಿ.ಆರ್. ನಿಂದ ಬರುವ ಸಮಸ್ತ ಕನ್ನಡಿಗರು ಯಾವುದೇ ಮೆಟ್ರೋ ಸ್ಟೇಷನ್‌ನಿಂದ ಸಂಘಕ್ಕೆ ಬರಬಹುದು.

ಇದರ ಜೊತೆಗೆ ಸಾಹಿತಿ ನಿರಂಜನ ಅವರ ಕೃತಿಯನ್ನು ಬೆಂಗಳೂರಿನ ನಯನ ಕಲಾ ಮಂದಿರದಲ್ಲಿ ಆಗಸ್ಟ್ 1ರಂದು ಬಿಡುಗಡೆ ಮಾಡಲಾಗಿದೆ. ಇದು ದೆಹಲಿ ಕರ್ನಾಟಕ ಸಂಘ ಹೊರತಂದಿರುವ 11ನೇ ಕೃತಿಯಾಗಿದೆ. ಈ ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿಗಳಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಹಂಪಾ ನಾಗರಾಜಯ್ಯ, ಡಾ. ಎಂ.ಎಸ್. ಕೃಷ್ಣಯ್ಯ, ಡಾ. ಕೆ.ವೈ. ನಾರಾಯಣ ಸ್ವಾಮಿ, ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ನಿರಂಜನ್ ಕುಮಾರ್, ಡಾ. ಟಿ.ಎಸ್. ಪೂರ್ಣಿಮಾ, ಶ್ರೀ ಎಸ್.ಆರ್. ವಿಜಯಶಂಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ್ ಅವರುಗಳ ಸಮ್ಮುಖದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ಮೂಡಿಬಂದಿತು. ನಯನ ಕಲಾಮಂದಿರ ತುಂಬಿ ತುಳುಕಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಅತಿಥಿವರ್ಯರಿಗೆ ಹಾಗೂ ವಿಶೇಷವಾಗಿ ಶ್ರೀ ಟಿ.ಎಸ್. ನಾಗಾಭರಣ ಮತ್ತು ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ ಧನ್ಯವಾದಗಳು.

ರಾಷ್ಟ್ರಪ್ರಶಸ್ತಿ ಪಡೆದ 'ಹೆಬ್ಬೆಟ್ ರಾಮಕ್ಕ' ಚಲನಚಿತ್ರ ಪ್ರದರ್ಶನ ಹಾಗೂ 'ಗೌರವಾರ್ಪಣೆ' ಆಗಸ್ಟ್ 5 ರಂದು ಗಣ್ಯರ ಮತ್ತು ಲೋಕಸಭಾ, ರಾಜ್ಯ ಸದಸ್ಯರುಗಳಾದ ಶ್ರೀ ಕೆ.ಸಿ. ರಾಮಮೂರ್ತಿ, ಪ್ರೊ. ಎಲ್. ಹನುಮಂತಯ್ಯ, ಶ್ರೀ ಜಿ.ಸಿ. ಚಂದ್ರಶೇಖರ್, ಶ್ರೀ ಪಿ.ಸಿ. ಮೋಹನ್ ಹಾಗೂ ಖ್ಯಾತ ಸಾಹಿತಿ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರ ಸಮ್ಮುಖದಲ್ಲಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ನಿರ್ದೇಶಕರಾದ ಶ್ರೀ ಎನ್.ಆರ್. ನಂಜುಂಡೇಗೌಡ ಹಾಗೂ ನಿರ್ಮಾಪಕರಾದ ಶ್ರೀ ಎಸ್.ಎ. ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು. ಈ ಕಾರ್ಯಕ್ರಮಕ್ಕೆ ಬಂದ ಅತಿಥಿಗಳಿಗೆ ಧನ್ಯವಾದಗಳು.

ಬರುವ ದಿನಗಳಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಕೆಲ ರಸ್ತೆಗಳಿಗೆ ಕರ್ನಾಟಕದ ಕೆಲ ಮಹನಿಯರುಗಳ ಹೆಸರು, ಅಂಚೆ ಚೀಟಿ ಹಾಗೂ ಪ್ರತಿಮೆಗಳು ಕಾರ್ಯರೂಪಕ್ಕೆ ಬರಲಿವೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2018 ಅಗಸ್ಟ್ 15** — ಬುಧವಾರ, ಬೆಳಿಗ್ಗೆ : 8.00 ಗಂಟೆಗೆ

ಸ್ವಾತಂತ್ರ್ಯ ದಿನಾಚರಣೆ–ಧ್ವಜಾರೋಹಣ

**2018 ಅಗಸ್ಟ್ 19** — ಭಾನುವಾರ, ಸಂಜೆ : 5.00 ಗಂಟೆಗೆ

'ಕೊನೆಯ ಅಲೆ' ಪುಸ್ತಕ ಬಿಡುಗಡೆ ಹಾಗೂ ಧಾರವಾಡದ ಉಸ್ತಾದ್ ಮೋಹಸಿನ್ ಖಾನ್ ಅವರಿಂದ ಸಿತಾರ್ ವಾದನ

**2018 ಅಗಸ್ಟ್ 26** — ಭಾನುವಾರ, ಸಂಜೆ : 6.00 ಗಂಟೆಗೆ

ಶ್ರೀಮತಿ ರುಕ್ಮಿಣಿ ಹಂಡೆ ಅವರಿಂದ ಹರಿಕಥೆ

**2018 ಸೆಪ್ಟೆಂಬರ್ 9** — ಭಾನುವಾರ, ಸಂಜೆ : 6.00 ಗಂಟೆಗೆ

ವಿದ್ವಾನ್ ಗೀತಾ ಸಿರೀಶ್ ಅವರಿಂದ ಭರತನಾಟ್ಯ

**2018 ಸೆಪ್ಟೆಂಬರ್** — 13 ರಿಂದ 16 ರವರೆಗೆ

ಗಣೇಶ ಸಾಂಸ್ಕೃತಿಕ ಉತ್ಸವ

## ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯು ದಿನಾಂಕ 13.09.2018 ರಿಂದ 16.09.2018ರವರೆಗೆ ಅಶೋಕ ವಿಹಾರ್ ಪೋಲಿಸ್ ಕಾಲೋನಿಯ ಕಮ್ಯುನಿಟಿ ಹಾಲ್‌ನಲ್ಲಿ ಗಣೇಶೋತ್ಸವವನ್ನು ಆಚರಿಸಲಿದೆ.

## ಉಪನ್ಯಾಸ ಮಾಲೆ

**ಡಾ. ಭೀಮ ಭಟ್**
**ಅವರಿಂದ "ಮಾನಸಿಕ ಪ್ರಕೃತಿಯ" ಕುರಿತು ಉಪನ್ಯಾಸ**



ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ ಡಾ. ಭೀಮ ಭಟ್ ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.
**ಆಗಸ್ಟ್ 26ರ ಭಾನುವಾರ ಅಪರಾಹ್ನ 3.00 ರಿಂದ 4.30 ರವರೆಗೆ "ಪ್ರಕೃತಿಯ ಅನುಸಾರವಾಗಿ ಆಹಾರ ಮತ್ತು ಜೀವನ ಶೈಲಿ" ಕುರಿತು ಉಪನ್ಯಾಸ ಹಾಗೂ ಸಂಜೆ : 4.30 ರಿಂದ 6.00 ರವರೆಗೆ ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ. ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಆಗಸ್ಟ್, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಆಗಸ್ಟ್, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26 ಆಗಸ್ಟ್, 2018ರಂದು ಬೆಳಿಗ್ಗೆ 11 ಗಂಟೆಯಿಂದ

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 11
ಅಗಸ್ಟ್ 2018

ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಪ್ರತ್ಯೇಕತೆಯ ಕೂಗನ್ನು ಬಿಟ್ಟು ಎಲ್ಲರೂ ಒಂದಾಗಿರೋಣ

ರಾಜ್ಯ ಸರಕಾರವು ಮಂಡಿಸಿದ ಮುಂಗಡಪತ್ರದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ನಿರ್ಲಕ್ಷಿಸಲಾಗಿದೆ; ಹೊಸ ಸಮ್ಮಿಶ್ರ ಸರಕಾರದಲ್ಲಿ ಆ ಪ್ರದೇಶದ ಜನರಿಗೆ ಸಾಕಷ್ಟು ಸಿಕ್ಕಿಲ್ಲ ಎಂಬ ಸಿಡುಕಿನಲ್ಲಿ ಉತ್ತರ ಕರ್ನಾಟಕವು ಪ್ರತ್ಯೇಕ ರಾಜ್ಯವಾಗಬೇಕು ಎಂಬ ಕೂಗು ಎದ್ದಿದೆ. ಉತ್ತರ ಕರ್ನಾಟಕ ಪ್ರದೇಶವು ರಾಜ್ಯಕ್ಕೆ ಆರು ಮುಖ್ಯಮಂತ್ರಿಗಳನ್ನು ನೀಡಿದೆ. ಆದರೆ ಈ ಪ್ರದೇಶದ ಹಲವಾರು ಸಮಸ್ಯೆಗಳಿಗೆ ಪರಿಹಾರ ಇನ್ನೂ ದೊರಕಿಲ್ಲ. ನೀರಿಗಾಗಿ ಮಳೆಯನ್ನೇ ಅವಲಂಭಿಸಿರುವ ಈ ಪ್ರದೇಶದ ಜನರು ಕೃಷಿಕ್ಷೇತ್ರದಲ್ಲಿ ಮಹತ್ತರವಾದ ಮುನ್ನಡೆಯನ್ನು ಸಾಧಿಸಲಾಗಲಿಲ್ಲ. ಅಲ್ಲದೇ ಶಿಕ್ಷಣ, ಆರೋಗ್ಯ, ಸ್ಥಳೀಯ ಉದ್ಯೋಗ ಮತ್ತು ಮೂಲಸೌಕರ್ಯಗಳಿಂದ ಕೂಡಾ ಇಲ್ಲಿನ ಜನರು ವಂಚಿತರಾಗಿದ್ದಾರೆ. ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ವಿಚಾರದಲ್ಲಿ ಮುಖ್ಯಮಂತ್ರಿಯವರು ತಾರತಮ್ಯ ನೀತಿ ಅನುಸರಿಸಿದ್ದಾರೆ. ಇಂತಹ ಆಕ್ಷೇಪಗಳನ್ನು ಎತ್ತಿರುವ ಜನರು ಉತ್ತರ ಕರ್ನಾಟಕವೆಂಬ ಪ್ರತ್ಯೇಕ ರಾಜ್ಯ ಬೇಕೆಂದಿದ್ದಾರೆ. ಬೆಳಗಾವಿಯನ್ನು ಎರಡನೇ ರಾಜಧಾನಿಯಾಗಿ ಬೆಳೆಸುವ ಪ್ರಯತ್ನ, ನಂಜುಂಡಪ್ಪ ವರದಿಯ ಅನುಷ್ಠಾನ, ಕೃಷ್ಣಾ ಮೇಲ್ದಂಡೆ ಯೋಜನೆ, ಕೈಗಾರಿಕೆಗಳ ವಿವಿಧ ಕ್ಲಸ್ಟರ್‌ಗಳ ಸ್ಥಾಪನೆ ಇತ್ಯಾದಿ ಪ್ರಯತ್ನಗಳು ಮುಖ್ಯಮಂತ್ರಿಯವರಿಂದಾಗಲೀ ಅಥವಾ ಸರಕಾರದಿಂದಾಗಲೀ ಉತ್ತರ ಕರ್ನಾಟಕದ ಬಗ್ಗೆ ಯಾವುದೇ ನಿರ್ಲಕ್ಷ್ಯ ಆಗಿಲ್ಲ ಎಂಬುದನ್ನು ಸಾಬೀತು ಪಡಿಸಲು ಬಿಂಬಿಸಲಾಗುತ್ತಿದೆ.

ಸುದೀರ್ಘ ಚಳುವಳಿ ಮತ್ತು ಹೋರಾಟದ ನಂತರ ಏಕೀಕರಣಗೊಂಡ ಕರ್ನಾಟಕವು ಮತ್ತೆ ವಿಭಜನೆಯಾಗಬೇಕೆನ್ನುವ ಕೂಗಿಗೆ ಕಾರಣ ಕೇವಲ ರಾಜಕೀಯವೇ ಅಥವಾ ಅದಕ್ಕಿಂತಲೂ ಹೆಚ್ಚಿನದೇ ಎಂಬ ಕುರಿತು ಚಿಂತನೆ ನಡೆಸಬೇಕಾಗಿದೆ. ರಾಜ್ಯ ಸರಕಾರದ ಮುಂಗಡಪತ್ರದಲ್ಲಿ ಪ್ರಸ್ತಾಪಿಸಲಾದ ಹಲವು ಯೋಜನೆಗಳು ಸಮಗ್ರ ರಾಜ್ಯಕ್ಕೆ ಅನ್ವಯಗೊಳ್ಳುತ್ತವೆ. ಆಯಾ ಪ್ರಾದೇಶಿಕ ವಲಯಗಳಿಗೆ ಬೇಕಾದಂತಹ ವಿಶೇಷ ಸವಲತ್ತುಗಳನ್ನು ಆಯಾಯ ಕ್ಷೇತ್ರದ ಪ್ರತಿನಿಧಿಗಳಿಂದ ಪಡೆದು ಅದಕ್ಕೆ ಆಯವ್ಯಯಪತ್ರದಲ್ಲಿ ಯೋಗ್ಯ ಹಂಚಿಕೆಯನ್ನು ಮಾಡುವುದು ಸರಕಾರದ ಕರ್ತವ್ಯವಾಗುತ್ತದೆ. ಇನ್ನು ಆಡಳಿತದಲ್ಲಿ ತಮಗೆ ಪ್ರಾತಿನಿಧ್ಯ ಇಲ್ಲವೆನ್ನುವುದಕ್ಕೆ ಕಾರಣಗಳನ್ನು ಹುಡುಕಬೇಕಾಗುತ್ತದೆ. ಕರ್ನಾಟಕದ ಚುನಾವಣಾ ಫಲಿತಾಂಶವು ಯಾವುದೇ ಒಂದು ರಾಜಕೀಯ ಶಕ್ತಿಗೆ ಸ್ಪಷ್ಟವಾದ ಬಹುಮತವನ್ನು ನೀಡಿಲ್ಲದಿರುವುದು ಒಂದು ಮುಖ್ಯ ಅಂಶವಾಗಿದೆ. ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಭಿನ್ನತೆಯನ್ನು ಹೊಂದಿರುವಂತೆ ರಾಜ್ಯವು ವಿವಿಧ ಪ್ರದೇಶಗಳಲ್ಲಿ ಸಮುದಾಯದ ನಿಟ್ಟಿನಲ್ಲೂ ಭಿನ್ನತೆಯನ್ನು ಹೊಂದಿದೆ. ರಾಜಕೀಯದಲ್ಲಿ ಅಧಿಕಾರ ಪಡೆಯಲು ಮಾಡುತ್ತಿರುವ ಜಾತಿ ರಾಜಕೀಯದ ದುಷ್ಪರಿಣಾಮವೇ ಇದಾಗಿದೆ. ಉತ್ತಮ ಆಡಳಿತದ ಭರವಸೆ ಅಥವಾ ರಾಜಕೀಯ ನಾಯಕರ ಮುತ್ಸದ್ದಿತನಕ್ಕಿಂತಲೂ ಹೆಚ್ಚಾಗಿ ತಮ್ಮ ಜಾತಿಯ ಪಾಲಿಗೆ ಅಧಿಕಾರ ಸಿಗಬೇಕು ಎನ್ನುವ ಹಂಬಲ ಮತ್ತು ಅದಕ್ಕೆ ಪ್ರೋತ್ಸಾಹಕವಾಗಿ ವಿವಿಧ ಜಾತಿಗಳ ಮುಖಂಡರು ಮತ್ತು ಮಠಾಧೀಶರುಗಳು ನಿರ್ಧರಿಸುವ ರಾಜಕೀಯ ದಿಕ್ಸೂಚಿಯು ಸ್ಪಷ್ಟವಾದ ರಾಜಕೀಯ ಫಲಿತಾಂಶವನ್ನು ನೀಡಲು ಸೋತಿದೆ. ಜತೆಗೆ, ಅಭಿವೃದ್ಧಿಯ ಪರಿಭಾಷೆಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬದಲಾಗುತ್ತಿದೆ. ದಕ್ಷಿಣ ಕರ್ನಾಟಕದ ಅಭಿವೃದ್ಧಿ, ಕರಾವಳಿ ಪ್ರದೇಶದ ಅಭಿವೃದ್ಧಿ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಯ ವಿಚಾರಗಳು ಯಾವುವು ಎನ್ನುವುದನ್ನು ಆಡಳಿತ ವ್ಯವಸ್ಥೆಯು ಕಂಡುಕೊಳ್ಳಬೇಕು ಮತ್ತು ಅದಕ್ಕೆ ಅನುಗುಣವಾದ ಯೋಜನೆಗಳನ್ನು ಹಾಕಿಕೊಳ್ಳಬೇಕು. ಈ ಹಿಂದೆ ಆದ ಲೋಪಗಳನ್ನು ಬದಿಗಿಟ್ಟು ಮುಂದಿನ ದಿನಗಳಿಗಾಗಿ ಹೊಸ ನೋಟದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ತೊಡೆದು ಹಾಕಿ ಸಮಗ್ರ ಕರ್ನಾಟಕದ ಅಭಿವೃದ್ಧಿಯನ್ನು ಮಾಡಬೇಕು. ಪ್ರತ್ಯೇಕತೆಯ ಕೂಗನ್ನು ಬಿಟ್ಟು ಎಲ್ಲರೂ ಒಂದಾಗಿ ನಮ್ಮ ರಾಜ್ಯವನ್ನು ಅಭಿವೃದ್ಧಿಯತ್ತ ಸಾಗಿಸೋಣ. ಜತೆಗೆ ದೇಶದ ಪ್ರಗತಿಗೆ ಸಾಕ್ಷಿಯಾಗೋಣ.

ಭಾರತದ ಎಪ್ಪತ್ತೆರಡನೇ ಸ್ವಾತಂತ್ರ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲು ಎಲ್ಲರೂ ಸಡಗರದಿಂದ ಕಾಯುತ್ತಿದ್ದೇವೆ. ನಮ್ಮೆಲ್ಲರ ಒಗ್ಗಟ್ಟಿನ ಮತ್ತು ಭಾರತವೆಂಬ ಪ್ರಜಾತಾಂತ್ರಿಕ ರಾಷ್ಟ್ರದ ಹೆಮ್ಮೆಯ ಉತ್ಸವವಿದು. ಅಭಿಮತದ ಓದುಗರಿಗೆಲ್ಲರಿಗೂ ಹಾರ್ದಿಕ ಶುಭಾಶಯಗಳು. ಅ

ಬಾಲಕೃಷ್ಣ ನಾಯ್ಕ್ ಡಿ.




# ಆಯುರ್ವೇದದಿಂದ ಆರೋಗ್ಯ ಉಪನ್ಯಾಸ ಮಾಲೆಯ ಉಪನ್ಯಾಸ

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ವೈದ್ಯರಾದ ಡಾ. ಭೀಮಭಟ್ಟರವರು 'ಆಯುರ್ವೇದದಿಂದ ಆರೋಗ್ಯ' ಉಪನ್ಯಾಸ ಮಾಲೆಯ ಐದನೆಯ ಉಪನ್ಯಾಸ ನೀಡಿದರು. 'ಆರೋಗ್ಯವೇ ಭಾಗ್ಯ' ಮತ್ತು 'ಊಟ ಬಲ್ಲವನಿಗೆ ರೋಗವಿಲ್ಲ' ಗಾದೆಗಳ ಮಹತ್ವವನ್ನು ತಿಳಿಸಿದರು. ನಮ್ಮ ಜೀವ "ಶರೀರ, ಮನಸ್ಸು ಮತ್ತು ಆತ್ಮ"ಗಳಿಂದ ಮಾಡಲ್ಪಟ್ಟಿದೆ. ಈ ಮೂರು ಸಮನಾಗಿದ್ದರೆ ಮಾತ್ರ ನಮ್ಮ ಆರೋಗ್ಯ ಸರಿಯಾಗಿರುತ್ತದೆ. ಅಸಮಾನವಾದರೆ ರೋಗಗಳು ಬರುತ್ತವೆ. ನಮ್ಮ ಶರೀರ ಪಂಚಮಹಾಭೂತ ಮತ್ತು ತ್ರಿದೋಷಗಳಿಮದ, ಸಪ್ತಧಾತು ಮತ್ತು ಮಲಗಳಿಂದ ಮಾಡಲ್ಪಟ್ಟಿದೆ. ಶಾರೀರಿಕ ಆರೋಗ್ಯ ಸರಿಯಾಗಿ ಇರಬೇಕಾದರೆ ಇವೆಲ್ಲವುಗಳೂ ಸಮಪ್ರಮಾಣದಲ್ಲಿರಬೇಕು. ಅದಕ್ಕೋಸ್ಕರ ನಾವು ನಮ್ಮ ಆಹಾರ ಮತ್ತು ಜೀವನ ಶೈಲಿಯನ್ನು ಅವರವರ ಶಾರೀರಿಕ ಪ್ರಕೃತಿ (ವಾತ, ಪಿತ್ತ, ಕಫ) ಅನುಸಾರವಾಗಿ ಅಳವಡಿಸಿಕೊಳ್ಳಬೇಕು. ವಾತ ಪ್ರಕೃತಿ, ಪಿತ್ತ ಪ್ರಕೃತಿ ಮತ್ತು ಕಫ ಪ್ರಕೃತಿ. ಮನುಷ್ಯರ ದೈಹಿಕ ಸ್ವರೂಪ ಬೇರೆ ಬೇರೆಯಾಗಿರುತ್ತದೆ. ಈ ಮೂರು ಪ್ರಕೃತಿಯ ಮನುಷ್ಯರನ್ನು ಗುರುತಿಸಲು ಆಯುರ್ವೇದದ ಸಂಹಿತೆಗಳಲ್ಲಿ ಅತ್ಯಂತ ಸರಳವಾಗಿ ಮತ್ತು ವಿವರವಾಗಿ ವರ್ಣಿಸಲಾಗಿದೆ. ಅಲ್ಲದೇ ಪ್ರಕೃತಿಯ ಅನುಸಾರವಾಗಿ ಯಾವ ಆಹಾರ ಹಿತಕರ ಮತ್ತು ಯಾವ ಆಹಾರ ಅಹಿತಕರ; ಪ್ರಕೃತಿಯ ಅನುಸಾರವಾಗಿ ಯಾವ ಯಾವ ರೋಗಗಳು ಬರಬಹುದು ಮತ್ತು ಅವುಗಳ ಉಪಾಯ, ಎಲ್ಲವನ್ನೂ ವಿವರವಾಗಿ ತಿಳಿಸಲಾಗಿದೆ.

ಡಾ. ಭೀಮಭಟ್ಟರವರು ವಾತ ಪ್ರಕೃತಿ, ಪಿತ್ತ ಪ್ರಕೃತಿ ಮತ್ತು ಕಫ ಪ್ರಕೃತಿಯ ಮನುಷ್ಯರನ್ನು ಹೇಗೆ ಗುರುತಿಸಬಹುದು ಮತ್ತು ಆಯಾ ಪ್ರಕೃತಿಗೆ ಅನುಸಾರವಾಗಿ ಯಾವ ಯಾವ ಹಣ್ಣು, ತರಕಾರಿ, ಬೇಳೆ ಕಾಳುಗಳು, ಹಾಲು, ಬೆಣ್ಣೆ, ಸಿಹಿ ಪದಾರ್ಥ, ಕಹಿ, ಹುಳಿ, ಖಾರ, ಎಣ್ಣೆ ಇತ್ಯಾದಿಗಳ ಬಗ್ಗೆ ವಿವರವಾಗಿ ತಿಳಿಸಿದರು.

ಈ ಪ್ರಕೃತಿಯ ಜ್ಞಾನ ಮತ್ತು ಆ ಪ್ರಕಾರ ಆಹಾರ–ಇದು ಆಯುರ್ವೇದದ ಅತ್ಯುತ್ತಮ ಜ್ಞಾನ. ಆರೋಗ್ಯವನ್ನು ಕಾಪಾಡಿಕೊಳ್ಳಲು ರೋಗ ಬಾರದಂತೆ ನೋಡಿಕೊಳ್ಳಲು ಮತ್ತು ರೋಗದ ಚಿಕಿತ್ಸೆಯಲ್ಲೂ ಈ ಜ್ಞಾನ ಅತ್ಯಾವಶ್ಯಕ. ನಮ್ಮ ನಮ್ಮ ಪ್ರಕೃತಿಯನ್ನು ಅರ್ಥಮಾಡಿಕೊಂಡು ಅದರ ಅನುಸಾರವಾಗಿ ಆಹಾರವನ್ನು ಮತ್ತು ಜೀವನ ಶೈಲಿಯನ್ನು ಪರಿಪಾಲಿಸಿದರೆ ಯಾವ ರೋಗವೂ ಬರುವುದಿಲ್ಲ ಎಂದರು. ಅ

***ಅಭಿಮತ ವರದಿ***





# ಸಂಘದ ಆರ್ಟ್ ಗ್ಯಾಲರಿಯಲ್ಲಿ ಸುರೇಶ ಡಿ. ಹರಿವಾಣ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ

ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ದಾವಣಗೆರೆಯ ಚಿತ್ರಕಲಾವಿದ ಸುರೇಶ ಡಿ. ಹರಿವಾಣ ಅವರ ಮೂರು ದಿನಗಳ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ರಾಷ್ಟ್ರಪತಿ ಭವನದ ಖ್ಯಾತ ಕಲಾವಿದರಾದ ಶ್ರೀ ಜೆ.ಪಿ. ಸಿಂಗ್ ಅವರು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದಶಿ ಶ್ರೀ ಸಿ.ಎಂ. ನಾಗರಾಜ  ಅವರ ಸಮ್ಮುಖದಲ್ಲಿ ಇದೇ ಜುಲೈ 27ರಂದು ಉದ್ಘಾಟಿಸಿದರು.


ಉದ್ಘಾಟಿಸಿ ಮಾತನಾಡಿದ ಜೆ.ಪಿ. ಸಿಂಗ್ ಅವರು ಇಂದು ಗುರು ಪೂರ್ಣಿಮೆ ಈ ಶುಭ ದಿನದಲ್ಲಿ ಸುರೇಶ ಅವರ ಈ ಕಲಾ ಪ್ರದರ್ಶನ ಯಶಸ್ವಿಯಾಗಿ ನಡೆಯಲಿ ಎಂದು ಹೇಳಿ, ಗುರು ಮತ್ತು ಶಿಷ್ಯರ ಸಂಬಂಧ ಬಹಳ ಕಾಲದಿಂದಲೂ ಇದೆ ಮತ್ತು ಅಜಂತ ಕಲಾಕೃತಿಗಳನ್ನು ನೋಡಿ ಕಲಾವಿದನ ಮಹತ್ವವನ್ನು ತಿಳಿಯಬಹುದು ಎಂದು ಹೇಳಿ ಕಲಾ ಪ್ರದರ್ಶನಕ್ಕೆ ಶುಭ ಕೋರಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡುತ್ತ ನಾವು ದೆಹಲಿಯಲ್ಲಿ ಕರ್ನಾಟಕದ ಕಲಾವಿದರನ್ನು ಕರೆಸಿ ಇಲ್ಲಿ ವೇದಿಕೆ ಮಾಡಿಕೊಡುತ್ತಿದ್ದೇವೆ, ನಮ್ಮ ಕಲಾವಿದರು ಹೆಚ್ಚಿನ ಉನ್ನತ ಸ್ಥಾನವನ್ನು ಅಲಂಕರಿಸಲಿ ಮತ್ತು ದೆಹಲಿಯಲ್ಲಿ ಹೆಸರು ಮಾಡಲಿ ಎಂದು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಹೇಳುತ್ತಾ ದಾವಣಗೆರೆಯಿಂದ ಬಂದ ಕಲಾವಿದ ಸುರೇಶ ಡಿ. ಹರಿವಾಣ ಅವರ ಕಲಾಪ್ರದರ್ಶನ ಯಶಸ್ವಿಯಾಗಲಿ ಎಂದು ಹಾರೈಸಿದರು.

ಕಲಾವಿದ ಸುರೇಶ ಡಿ. ಹರಿವಾಣ ಮಾತನಾಡುತ್ತಾ ದೆಹಲಿ ಕರ್ನಾಟಕ ಸಂಘ ನಮ್ಮಂತಹ ಕಲಾವಿದರಿಗೆ ಸುವಿಯಲ್ಲಿ ಇಂತಹೆ ಭಾರತದ ರಾಜಧಾನಿಯಲ್ಲಿ ಒಂದು ಒಳ್ಳೆಯ ವೇದಿಕೆಯನ್ನು ಕಲ್ಪಿಸಿಕೊಡುತ್ತಿದ್ದಾರೆ. ಅದು ಬಹಳ ಹೆಮ್ಮೆಯ ವಿಷಯ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕಲಾವಿದರಾದ ಸುಧೀರ್ ಫಡ್ನೀಸ್, ಆನಂದ ಮುರಗೋಡ, ವಿಕಾಸ್ ಆರ್., ಕವಿತಾ ಸುರೇಶ್ ಮತ್ತು ರಾಧಿಕಾ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಸುರೇಶ್ ಡಿ. ಹರಿವಾಣ ಅವರು ನಿರೂಪಿಸಿದರು. ಅ

**ಅಭಿಮತ ವರದಿ**





## ಮಂಗಳೂರಿನಿಂದ ಜಪಾನ್ ಯುವಕನಿಗೆ ಕನ್ನಡ ಪಾಠ

## ರಾಮನಗರದ ರೈತರೊಂದಿಗೆ ಕನ್ನಡದಲ್ಲೇ ವ್ಯವಹರಿಸುವ ಇಚ್ಛೆ

# ಹದಿನೈದೇ ದಿನಗಳಲ್ಲಿ ಕನ್ನಡ ಕಲಿತ ಜಪಾನಿಗ



ಕರುಕಿ

### ಬಸವಣ್ಣನ ವಚನ ತಪ್ಪಿಲ್ಲದೇ ಓದುತ್ತಾರೆ

ಬಸವಣ್ಣನವರ 'ಕಳಬೇಡ, ಕೊಲಬೇಡ. ಹುಸಿಯ ನುಡಿಯಲು ಬೇಡ' ವಚನವನ್ನು ಕರುಕಿ ನಿರರ್ಗಳವಾಗಿ ಓದುತ್ತಾರೆ. ಇದನ್ನು ಅರವಿಂದ ಅವರು ತಮ್ಮ ಫೇಸ್ಬುಕ್ ಖಾತೆಯಲ್ಲಿ ವಿಡಿಯೋ ಸಮೇತ ಅಪ್‌ಲೋಡ್ ಮಾಡಿದ್ದಾರೆ. 'ನಮಸ್ಕಾರ' ಎನ್ನುತ್ತ ಕನ್ನಡ ಮಾತನ್ನು ಆರಂಭಿಸುತ್ತಾರೆ. ಓದು ಮತ್ತು ಬರಹವನ್ನು ಶೀಘ್ರ ಕಲಿತಿರುವ ಕರುಕಿ ಮಾತನಾಡುವಾಗ ಸ್ವಲ್ಪ ತಡವರಿಸುತ್ತಾರೆ. ಏನೇ ಕೇಳಿದರೂ ಯೋಚನೆ ಮಾಡಿ ಕನ್ನಡದಲ್ಲಿ ಉತ್ತರಿಸುತ್ತಾರೆ ಎನ್ನುತ್ತಾರೆ ಅವರು.

ಕನ್ನಡ ನಾಡಿನಲ್ಲಿದ್ದೂ ಹಲವರು ಇಂಗ್ಲಿಷ್ ವ್ಯಾಮೋಹಿಗಳಾಗಿದ್ದಾರೆ. ಅಂತದ್ದರಲ್ಲಿ ಜಪಾನ್ ಪ್ರಜೆಯೊಬ್ಬ ರೇಷ್ಮೆ ಬೆಳೆ ಕುರಿತು ಅಧ್ಯಯನಕ್ಕಾಗಿ ಕರ್ನಾಟಕಕ್ಕೆ ಬಂದು ಹದಿನೈದೇ ದಿನದಲ್ಲಿ ಕನ್ನಡ ಕಲಿತು ಕನ್ನಡ ಪ್ರೇಮ ಪ್ರೇಮ ಮೆರೆದಿದ್ದಾರೆ.

ವಿಶೇಷವೆಂದರೆ ಸ್ಪಷ್ಟ ಕನ್ನಡ ಕಲಿತು ರಾಮನಗರ ರೇಷ್ಮೆ ಬೆಳೆಗಾರರೊಂದಿಗೆ ಕನ್ನಡದಲ್ಲೇ ವ್ಯವಹರಿಸುವ ಇಚ್ಛೆ ಈ ಯುವಕನದ್ದು. ಈತನಿಗೆ ಕನ್ನಡ ಕಲಿಸಿದವರು ಮಂಗಳೂರಿನ ಯುವಕ ಪ್ರಸ್ತುತ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿರುವ ಅರವಿಂದ ಬಿಜೈ.

ಈತ ಇಪ್ಪತ್ತೆರಡು ವರ್ಷದ ಕರುಕಿ. ಜಪಾನ್‌ನ ಚಿಬಾ ಮೂಲದವರು. ಜಪಾನ್ ಝ್ಯುಕಾ ಕಂಪೆನಿಯ ಮುಖಾಂತರ ರೇಷ್ಮೆ ಕುರಿತು ಅಧ್ಯಯನಕ್ಕಾಗಿ ಕರ್ನಾಟಕಕ್ಕೆ ಆಗಮಿಸಿದ್ದಾರೆ.

ಜಪಾನ್‌ನಿಂದ ದೆಹಲಿಗೆ ಬಂದು ಕರುಕಿ, ಅಲ್ಲಿನ ಝುಬಾನ್ ಭಾಷಾ ಕಲಿಕಾ ಸಂಸ್ಥೆಯಲ್ಲಿ ತನ್ನ ಕನ್ನಡ ಕಲಿಕೆಯ ಇಚ್ಛೆಯನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಸಂಸ್ಥೆಯವರು ಅರವಿಂದ ಅವರನ್ನು ಸಂಪರ್ಕಿಸಿ ಆತನಿಗೆ ಕನ್ನಡ ಪಾಠ ಹೇಳಿಕೊಡುವಂತೆ ಮನವಿ ಮಾಡಿದ್ದರು.

ದಿನಕ್ಕೆ ನಾಲ್ಕು ಗಂಟೆಯಂತೆ ಒಟ್ಟು ಹದಿನೈದು ದಿನಗಳ ಕಾಲ ಅರವಿಂದ ಅವರು ಕರುಕಿ ಅವರಿಗೆ ಕನ್ನಡ ಹೇಳಿಕೊಟ್ಟಿದ್ದಾರೆ. ಆತನ ಕಲಿಕಾಸಕ್ತಿ ಹೇಗಿತ್ತೆಂದರೆ ಮೊದಲ ದಿನದಲ್ಲೇ ಕನ್ನಡ ವರ್ಣಮಾಲೆಯ 'ಅ' ದಿಂದ 'ಳ' ದವರೆಗೆ ಬರೆದು ತೋರಿಸಿದ್ದಾರೆ ಎನ್ನುತ್ತಾರೆ ಅರವಿಂದ್.

**ಕನ್ನಡದಲ್ಲಿ ಟೈಪಿಂಗ್** : ಕನ್ನಡ ಟೈಪಿಂಗ್ ಕಲಿಯಲು ಮೊಬೈಲ್‌ನಲ್ಲಿ ಲಿಪಿಕಾರ್ ಮತ್ತು ಲ್ಯಾಪ್‌ಟಾಪ್‌ನಲ್ಲಿ ನುಡಿ ಸಾಫ್ಟ್‌ವೇರ್‌ನ್ನು ಅರವಿಂದ್ ಅವರು ಡೌನ್‌ಲೋಡ್ ಮಾಡಿಕೊಟ್ಟಿದ್ದಾರೆ. ಕರುಕಿ ಅವರು ಸದ್ಯ ಕನ್ನಡ ಟೈಪಿಂಗನ್ನೂ ಕಲಿತಿದ್ದು, ತಮ್ಮ ಮಾರ್ಗದರ್ಶಕ ಅವರಿಂದ್ ಅವರೊಂದಿಗೆ ಮೊಬೈಲ್ ಮೂಲಕ ಕನ್ನಡದಲ್ಲೇ ಸಂದೇಶ ಸಂವಹನ ನಡೆಸುತ್ತಾರೆ.

**ಕನ್ನಡ ಕಲಿಯಬೇಕೆಂದ ವಿದೇಶಿಗ:** ವಿಶೇಷವೆಂದರೆ ಹೊಸದಿಲ್ಲಿಯ ಝುಬಾನ್ ಭಾಷಾ ಕಲಿಕಾ ಸಂಸ್ಥೆಯಲ್ಲಿ ಕನ್ನಡ ಕಲಿಸಿ ಎಂದು ಕೇಳಿದ ಮೊದಲ ವಿದೇಶಿಗ ಬಹುಶಃ ಕರುಕಿ ಅವರಾಗಿದ್ದಾರೆ ಎಂದು ಸಂಸ್ಥೆಯವರೇ ಹೇಳುತ್ತಾರಂತೆ. ಈ ಸಂಸ್ಥೆಯಲ್ಲಿ ಹೊರರಾಜ್ಯ ಅಥವಾ ವಿದೇಶಗಳಿಂದ ಆಗಮಿಸಿದವರಿಗೆ ಭಾಷಾ ಕಲಿಕೆ ತರಬೇತಿಯನ್ನು ನೀಡಲಾಗುತ್ತದೆ. ಉರ್ದು, ಹಿಂದಿ, ಇಂಗ್ಲಿಷ್ ಸೇರಿದಂತೆ ವಿವಿಧ ಭಾಷೆಗಳನ್ನು ಇಲ್ಲಿ ಕಲಿಸಲಾಗುತ್ತದೆ. ಆದರೆ ಕನ್ನಡ ಭಾಷೆ ಕಲಿಸಲು ಸಂಪನ್ಮೂಲ ವ್ಯಕ್ತಿಗಳಿಲ್ಲದ ಹಿನ್ನೆಲೆಯಲ್ಲಿ ಅರವಿಂದ ಅವರ ಮೂಲಕ ಕನ್ನಡವನ್ನು ಕಲಿಸಲಾಗಿದೆ.

ನಾನು ರೇಷ್ಮೆ ಕುರಿತು ಅಧ್ಯಯನಕ್ಕಾಗಿ ಕರ್ನಾಟಕಕ್ಕೆ ಬಂದಿದ್ದೇನೆ. ಇಲ್ಲಿನ ವ್ಯಾವಹಾರಿಕ ಭಾಷೆ ಕನ್ನಡವಾದ್ದರಿಂದ ಅದೇ ಭಾಷೆಯಲ್ಲಿ ಜನರೊಂದಿಗೆ ಬೆರೆಯುವ ಇಚ್ಛೆ ನನ್ನದು. ಮುಂದೆ ರಾಮನಗರದಲ್ಲಿ ರೇಷ್ಮೆ ಬೆಳೆ ಕುರಿತು ಅಧ್ಯಯನ ಮಾಡಲಿದ್ದೇನೆ. ರಾಮನಗರದ ರೇಷ್ಮೆ ಬೆಳೆಗಾರ ರೈತರೊಂದಿಗೆ ಕನ್ನಡದಲ್ಲೇ ವ್ಯವಹರಿಸುತ್ತೇನೆ. ಅ

*ಕೃಪೆ : ಉದಯವಾಣಿ*



ಅರವಿಂದ ಬಿಜೈ




# ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ-2018

## ದೆಹಲಿ ಕರ್ನಾಟಕ ಸಂಘವು ಸಂಸ್ಕೃತಿಯನ್ನು ಉಳಿಸುವಂತಹ ಕೆಲಸ ಮಾಡುತ್ತಿದೆ – ಸಚಿವೆ ಜಯಮಾಲಾ



ಕನಿಕಾ ಭಟ್



ಹರ್ಷಿತಾ ಕೊಕ್ಕಡ

> “
>
> ದೆಹಲಿ ಕರ್ನಾಟಕ ಸಂಘವು ನಮ್ಮ ನಾಡಿನಿಂದ ಹೊರ ಹೋದವರಿಗೆ ಕರುಳಬಳ್ಳಿಯ ಸಂಬಂಧವನ್ನು ಕಟ್ಟಿಕೊಡುತ್ತದೆ. ಪರ ಊರಿಗೆ ಬಂದು ಬದುಕನ್ನು ಕಟ್ಟುತ್ತಾ ಘನತೆಯಿಂದ ಬಾಳಿ ಸಂಘಟಿತರಾಗಿ ದೆಹಲಿ ಕರ್ನಾಟಕ ಸಂಘವನ್ನು ಇಡೀ ರಾಷ್ಟ್ರಕ್ಕೆ ಮಾದರಿಯಾದ ಸಂಘವನ್ನಾಗಿ ನೀವೆಲ್ಲ ಮಾಡಿದ್ದೀರಿ




ದೆಹಲಿ ಕರ್ನಾಟಕ ಸಂಘವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಬೆಂಗಳೂರು ಸಹಯೋಗದಲ್ಲಿ 'ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ–2018' ಕಾರ್ಯಕ್ರಮವನ್ನು ಇದೇ ಜುಲೈ 21ರಂದು ಆಯೋಜಿಸಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯಾದ ಶ್ರೀಮತಿ ಜಯಮಾಲಾ ಅವರು ಆಗಮಿಸಿದ್ದರು.

ಮುಖ್ಯ ಅತಿಥಿ ಶ್ರೀಮತಿ ಜಯಮಾಲಾ ಅವರು ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘವು ನಮ್ಮ ನಾಡಿನಿಂದ ಹೊರ ಹೋದವರಿಗೆ ಕರುಳಬಳ್ಳಿಯ ಸಂಬಂಧವನ್ನು ಕಟ್ಟಿಕೊಡುತ್ತದೆ. ಪರ ಊರಿಗೆ ಬಂದು ಬದುಕನ್ನು ಕಟ್ಟುತ್ತಾ ಘನತೆಯಿಂದ ಬಾಳಿ ಸಂಘಟಿತರಾಗಿ ದೆಹಲಿ ಕರ್ನಾಟಕ ಸಂಘವನ್ನು ಇಡೀ ರಾಷ್ಟ್ರಕ್ಕೆ ಮಾದರಿಯಾದ ಸಂಘವನ್ನಾಗಿ ನೀವೆಲ್ಲ ಮಾಡಿದ್ದೀರಿ ಎಂದು ಅವರು ಹರ್ಷ ವ್ಯಕ್ತಪಡಿಸಿದರು. ಸಂಘದ ಜತೆ ತನ್ನ ಸಂಬಂಧ ಹೊಸದೇನಲ್ಲ ಎಂದರು. "ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ನಾನು ಸಚಿವೆಯಾಗಿರುವ ಸುದ್ದಿಯನ್ನು ಮೊಟ್ಟ ಮೊದಲಿಗೆ ದೆಹಲಿಯಿಂದ ನನಗೆ ತಿಳಿಸಿದವರು. ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ ಎಂದರು. ಸಂಘದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ," ಎಂದರು. 'ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ' ಕಾರ್ಯಕ್ರಮವು ಒಂದು ಸಂಸ್ಕೃತಿಯನ್ನು ಉಳಿಸುವಂತಹ ಕೆಲಸ. ಕನ್ನಡದ ಮನಸ್ಸುಗಳು ಎಲ್ಲಿದ್ದರೂ ಆ ಸಂಸ್ಕೃತಿಯನ್ನು ಸವಿದು ಬೆಳೆಸುವಂತಹ ಕೆಲಸಗಳನ್ನು ನಾವು ಮಾಡುತ್ತೇವೆ ಎಂದು ಹೇಳಿ ಕಾರ್ಯಕ್ರಮ ನೀಡಿದ ಎಲ್ಲಾ ಪ್ರತಿಭೆಗಳನ್ನು ಅಬಿನಂದಿಸಿದರು.


ಯಾವುದೇ ಸ್ಥಾನಮಾನ ದೊರೆಯುವ ಅದೃಷ್ಟವಿದ್ದರೆ ಅದು ತಾನಾಗಿಯೇ ಬರುತ್ತದೆ. ಅದಕ್ಕಾಗಿ ಪ್ರಯತ್ನ ಪಡಬೇಕಾಗಿಲ್ಲ ಎಂದು ಹೇಳುತ್ತಾ ಶ್ರೀಮತಿ ಜಯಮಾಲಾ ಅವರು ತಾನು ಚಿತ್ರರಂಗಕ್ಕೆ ಬಂದದ್ದೂ ಕೂಡಾ ಆಕಸ್ಮಿಕವಾಗಿ ಎಂದರು. "ನಾನು 13ನೇ ವಯಸ್ಸಿಗೆ ಚಿತ್ರರಂಗಕ್ಕೆ ಬಂದೆ. ನನ್ನ 16ನೇ ವಯಸ್ಸಿಗೆ ಡಾ. ರಾಜ್‌ಕುಮಾರ್ ಅವರ ಜೊತೆ ಅಭಿನಯಿಸುವ ಅವಕಾಶ ಸಿಕ್ಕಿತು. ಅದಾದ ನಂತರ 75 ಸಿನಿಮಾಗಳಲ್ಲಿ ಅಭಿನಯಿಸಿದೆ. ಯಾವುದೇ ಒಂದು ಸಿನಿಮಾಕ್ಕೂ ಯಾರಲ್ಲಿಯೂ ಅವಕಾಶಕ್ಕಾಗಿ ಬೇಡಲಿಲ್ಲ. ಅಥವಾ ನನ್ನ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಕೊಡಿ, ರಾಜ್ಯ ಪ್ರಶಸ್ತಿ ಕೊಡಿ ಎಂದು ಕೇಳಲಿಲ್ಲ. ಆ ಸಿನಿಮಾಕ್ಕೆ ಯೋಗ್ಯತೆ ಇದ್ದರೆ, ಅರ್ಹತೆ ಇದ್ದರೆ ಅದು ತಾನಾಗಿಯೇ ಬರುತ್ತದೆ ಎಂಬ ನಂಬಿಕೆ ನನ್ನದು" ಎಂದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾನ್ಯ ಸಚಿವರನ್ನು ಸ್ವಾಗತಿಸಿ ಮಾತನಾಡುತ್ತ 2013ರಲ್ಲಿ ದೆಹಲಿಯಲ್ಲಿ 'ತುಳುಸಿರಿ' ಕಾರ್ಯಕ್ರಮವನ್ನು ಆಯೋಜಿಸಿದಾಗ ಶ್ರೀಮತಿ ಜಯಮಾಲಾ ಅವರು ಬಂದಿದ್ದರು ಎಂದರು. ಜಯಲಲಿತಾ, ಜಯಪ್ರದ, ಜಯಾಬಚ್ಚನ್ ಮತ್ತು ಬಿ. ಜಯಶ್ರೀ ಮೊದಲಾದ ಎಲ್ಲಾ ಜಯ ಎಂಬ ಹೆಸರಿನ ಚಿತ್ರನಟಿಯರಿಗೆ ರಾಜಕೀಯದಲ್ಲಿ ಉನ್ನತ ಸ್ಥಾನ ಸಿಕ್ಕಿದೆ, ನೀವು ಪ್ರಯತ್ನ ಮಾಡಿದರೆ ನಿಮಗೂ ಅವಕಾಶ ಇದೆ ಎಂದು ಶ್ರೀಮತಿ ಜಯಮಾಲಾ ಅವರಿಗೆ ಆ ಸಂದರ್ಭದಲ್ಲಿ ಹೇಳಿದ್ದೆ ಎಂದು ಶ್ರೀ ಬೆಳ್ಳಾರೆಯವರು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘ ವಿಶ್ವದಲ್ಲಿ ಅತೀ ದೊಡ್ಡ ಸಂಘವಾಗಿ ಬೆಳೆದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಿಂತಲೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿದ್ದೇವೆ ಎಂದರು. ಇದೇ ಸಂದರ್ಭದಲ್ಲಿ ಸಚಿವರಾದ ಶ್ರೀಮತಿ ಜಯಮಾಲಾ ಅವರನ್ನು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದಿಸಲಾಯಿತು. ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

'ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ–2018' ಕಾರ್ಯಕ್ರಮದಲ್ಲಿ ಸಂಘದ ಕಲಾವಿದರಾದ ಪವಿತ್ರಕಿರಣ್ ಮತ್ತು ಆರ್ಷಾಗೋಪಿನಾಥ್, ಸಪ್ನಾ ಅತ್ತಾವರ, ರಚನಾ, ರಮ್ಯ, ವರ್ಷಾ ಕಿಣಿ, ಮೇಘಾ ಕಿಣಿ, ಹರ್ಷಿತಾ ಕೊಕ್ಕಡ, ಅನ್ವಿತಾ ಲಕ್ಷ್ಮೀಭಟ್, ಕನಿಕಾ ಭಟ್, ಪ್ರಿಯಾಂಕ, ನವ್ಯಮಣಿ ಬಂಗೇರ ಅವರಿಂದ ಭರತನಾಟ್ಯ ಹಾಗೂ ಪ್ರೇರಣಾ ರಾವ್ ಮತ್ತು ಸೌಮ್ಯಶ್ರೀ ಅವರು ಕಥಕ್ ನೃತ್ಯ ಕಾರ್ಯಕ್ರಮಗಳನ್ನು ನೀಡಿದರು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಅವರು ನಿರೂಪಿಸಿದರು. ಅ

**ಅಭಿಮತ ವರದಿ**



ಸಪ್ನಾ ಅತ್ತಾವರ

ಪ್ರೇರಣಾ ರಾವ್

# ಶಾಸ್ತ್ರೀಯ ನೃತ್ಯವೆಂದರೆ ಬರಿಯ ಕುಣಿತವಲ್ಲ

ಶಾಸ್ತ್ರೀಯ ನೃತ್ಯವೆಂದರೆ ಬರಿಯ ಕುಣಿತವಲ್ಲ. ಅದು ಕುಣಿತದ ಪರಿಷ್ಕೃತ ಅಂಗ. ಅದರಲ್ಲಿ ರಸ, ಭಾವ, ಲಯ ಸೂಚಿಸುವ ಮುಖಮುದ್ರೆಗಳೂ, ಲಾಕ್ಷಣಿವಾಗಿ ತೋರಿಸುವ ಕೈ ಸನ್ನೆಯ ಅಂಗವಿಕ್ಷೇಪಗಳೂ ಸಾಂಕೇತಿಕವಾದ ಶರೀರಭಂಗಿಗಳೂ ಇದ್ದು ಒಂದು ಸಾಂಸ್ಕೃತಿಕ ಶ್ರದ್ಧೆಯನ್ನು ಪ್ರೇಕ್ಷಕರಿಗೆ ತಲುಪಿಸುವುದಕ್ಕಾಗಿ ಅಗತ್ಯ ಇರುವಂಥ ವ್ಯಕ್ತಪಡಿಸುವಿಕೆ ಅದರಲ್ಲಿ ಇರುತ್ತದೆ.

ನೃತ್ಯ ಎಂಬುದರಲ್ಲಿ ತಾಳ–ಲಯಗಳಿಂದ ಕೂಡಿದ ನರ್ತನವಿದೆಯಾದರೂ ಅದು ಶಾಸ್ತ್ರೀಯ ನೃತ್ಯವಾಗುವುದಿಲ್ಲ. ಒಂದು ಸಹಜವಾದ ಶುದ್ಧವಾದ ಭಾವ ಮತ್ತು ಗತಿಯಿಂದ ಕುಣಿಯುವುದು ನೃತ್ಯವಾಗುತ್ತದೆ.

ಭಾರತೀಯ ನೃತ್ಯಕಲೆಯ ದೇವಭಕ್ತರಾದ ಹರಿದಾಸರ ಮತ್ತು ದೇವದಾಸಿಯರ ಗಾನ–ನೃತ್ಯಗಳಿಗೆ ಪ್ರಸ್ತುತವಾದುದು. ದಕ್ಷಿಣ ಭಾರತದಲ್ಲಿ ಶಿವನ ಕುರಿತಾದ ಮೂರ್ತಿ ಶಿಲ್ಪವು ಯೋಗಿ ನಟರಾಜನ ವಿಶ್ವವನ್ನರಳಿಸುವ ನೃತ್ಯ ಮತ್ತವನ ಗಣಗಳ ನಾಟ್ಯ ಭಾವಗಳನ್ನು ಭರತನಾಟ್ಯದಲ್ಲಿ ಅಳವಡಿಸಿದರೆ, ಉತ್ತರ ಭಾರತದಲ್ಲಿ ರಾಧಾಕೃಷ್ಣರ ರಾಸಲೀಲೆಗಳನ್ನು ನಟವರ ಮತ್ತು ಗೋಪಿಯರ ನಾಟ್ಯಭಾವಗಳನ್ನು ಅಳವಡಿಸಿಕೊಂಡಿದೆ. ಹಾಗೆಯೇ ಪೂರ್ವ ದೇಶೀಯರು ದುರ್ಗೆಯ ರೋಷ ಮತ್ತು ಪ್ರಸನ್ನ ಕುಣಿತಗಳನ್ನು ಹಾಕಿಕೊಂಡರು. ಇದರಿಂದಾಗಿ ನೃತ್ಯ ಸಂಪ್ರದಾಯವು ಧಾರ್ಮಿಕ ಸಂಪ್ರದಾಯವಾಗಿ ನಮ್ಮ ದೇವಾಲಯಗಳಲ್ಲಿ ನಾಟ್ಯ ಸೇವೆಗಾಗಿ ಜನಗಣದ ಮುಂದೆ ಪ್ರಸಿದ್ಧಿ ಪಡೆಯುವಂತಾಯಿತು. ಹೊಯ್ಸಳ ರಾಜ ವಿಷ್ಣುವರ್ಧನನ ಪತ್ನಿ ಶಾಂತಲೆಯೇ ಇಂಥ ನೃತ್ಯಗಳಲ್ಲಿ ಪಾಲ್ಗೊಂಡುದರ ಉದಾಹರಣೆಯನ್ನು ಕೊಡಬಹುದು.

ನಾಟ್ಯವೇದವು ಐದನೇ ವೇದವೆಂದೂ, ಬ್ರಹ್ಮನೇ ಭರತಮುನಿಗೆ ಅದನ್ನು ಕೊಟ್ಟನೆಂದೂ, ಮತ್ತೆ ಭರತನು ಶಿವಪಾರ್ವತಿಯರೆದುರಿಗೆ ಅದನ್ನು ಆಡಿಸಿ ತೋರಿಸಿದನೆಂದೂ, ಶಿವನು ಪ್ರಸನ್ನನಾಗಿ ತನ್ನ ಗಣಪ್ರಮುಖ ತಾಂಡು ಎಂಬವನಿಗೆ ಅದನ್ನು ಕಲಿಸಬೇಕೆಂದು ಆಜ್ಞೆ ಮಾಡಿದನೆಂದೂ, ಪಾರ್ವತಿಯು ಕೃಷ್ಣನ ಮೊಮ್ಮಗನ ಪತ್ನಿ ಉಷೆಗೆ (ಬಾಣಾಸುರನ ಮಗಳು) ಅದನ್ನು ತಿಳಿಸಿ ಮತ್ತು ದ್ವಾರಕಾವಾಸಿಗಳ ಮುಖಾಂತರ ನೃತ್ಯವು ದೇಶದಲ್ಲೆಲ್ಲಾ ಹರಡಿತೆಂದೂ ಪುರಾಣಗಳು ಹೇಳುತ್ತವೆ. ಅ

***ಪೂಜಾ ಪಿ. ರಾವ್***



ಸೌಮ್ಯಶ್ರೀ


ಪವಿತ್ರಕಿರಣ್ ಮತ್ತು ಆರ್ಷಾಗೋಪಿನಾ


ವರ್ಷಾ ಕಿಣಿ




ರಮ್ಯ


ರಚನಾ







ನವ್ಯಮಣಿ ಬಂಗೇರ





ಪ್ರಿಯಾಂಕ





ಮೇಘಾ ಕಿಣಿ





ಅನ್ವಿತಾ ಲಕ್ಷ್ಮೀಭಟ್



## ಅಕ್ಷಯಾ ರವಿಚಂದ್ರನ್

ದೆಹಲಿ ಕರ್ನಾಟಕ ಸಂಘವು ನಡೆಸಿದ 'ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ-2018' ಕಾರ್ಯಕ್ರಮದಲ್ಲಿ ಪ್ರಮುಖ ನೃತ್ಯ ಪ್ರದರ್ಶನವನ್ನು ನೀಡಿದ ಅಕ್ಷಯಾ ರವಿಚಂದ್ರನ್ ಅವರು ತರಬೇತಿ ಪಡೆದ ಉತ್ತಮ ನೃತ್ಯ ಪಟು ಆಗಿದ್ದಾರೆ. ಕಲಾರಾಧಕರ ಕುಟುಂಬದಲ್ಲಿ ಜನಿಸಿದ ಅಕ್ಷಯಾ ರವಿಚಂದ್ರನ್ ಅವರಿಗೆ ಬಾಲ್ಯದಿಂದಲೂ ಭಾರತೀಯ ಕಲೆ, ಸಂಸ್ಕೃತಿಯ ಬಗ್ಗೆ ಅಪಾರ ಆಸಕ್ತಿ ಹಾಗೂ ಒಲವು. ಇವರ ನಾಟ್ಯದ ಪಯಣ ಬಾಲ್ಯದ ತಮ್ಮ ಎಳೆಯ ವಯಸ್ಸಿನಲ್ಲೇ ಹಂಸಿನಿ ಸೆಂಟರ್ ಫಾರ್ ಭರತ ನಾಟ್ಯಂ ಅ್ಯಂಡ್ ಕರ್ನಾಟಕ್ ಮ್ಯೂಸಿಕ್‌ನಲ್ಲಿ ಡಾ. ವಾಸುದೇವನ್ ಅವರ ಮಾರ್ಗದರ್ಶನದಲ್ಲಿ ಪ್ರಾರಂಭವಾಯಿತು. ಇವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಪರಿಣತಿ ಹೊಂದಿದ್ದಾರೆ. ಪ್ರಸ್ತುತ ಇವರು ದೆಹಲಿ ವಿಶ್ವವಿದ್ಯಾಲಯದ ವಿವೇಕಾನಂದ ಕಾಲೇಜಿನಲ್ಲಿ ಬಿ.ಎ. (ಇಂಗ್ಲಿಷ್) ವ್ಯಾಸಂಗ ಮುಗಿಸಿದ್ದಾರೆ. ನವೆಂಬರ್ 2010ರಲ್ಲಿ ತಮ್ಮ ರಂಗಪ್ರವೇಶವನ್ನು ಯಶಸ್ವಿಯಾಗಿ ಪೂರೈಸಿದ ಇವರು ಸೀನಿಯರ್ ಡಿಪ್ಲೋಮಾ ಇನ್ ಡಾನ್ಸ್ ಪ್ರಮ್ ಪ್ರಯಾಗ್ ಸಮಿತಿ, ಡಿಗ್ರಿ ಇನ್ ಡಾನ್ಸ್-ಗಂಧರ್ವ ಮಹಾವಿದ್ಯಾಲಯದಿಂದ ಪಡೆದಿರುತ್ತಾರೆ. ಅ

***ಪೂಜಾ ಪಿ. ರಾವ್***

# ಹಳಗನ್ನಡ ಸಾಹಿತ್ಯ- ಮರು ಸೃಷ್ಟಿಯ ಸವಾಲುಗಳು

**ಕಂತು 2**

ಕನ್ನಡ ಸಾಹಿತ್ಯ ಪರಿಷತ್ತು ಶ್ರವಣಬೆಳಗೊಳದಲ್ಲಿ ಭಗವಾನ್ ಬಾಹುಬಲಿಯ ಮಹಾಮಸ್ತಕಾಭಿಷೇಕ ಮಹೋತ್ಸವದ ಹಿನ್ನೆಲೆಯಲ್ಲಿ ಪ್ರಥಮ ಬಾರಿಗೆ ಅಖಿಲ ಭಾರತ ಹಳೆಗನ್ನಡ ಸಾಹಿತ್ಯ ಸಮ್ಮೇಳನವನ್ನು ಇದೇ ಜೂನ್ 24, 25 ಹಾಗೂ 26 ರಂದು ಚಾವುಂಡರಾಯ ಸಭಾಮಂಟಪದಲ್ಲಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಹಾಗೂ ಡಾ.ಷ. ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ವಿವಿಧ ಗೋಷ್ಠಿಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಸಿತು. ಹಳಗನ್ನಡ ಸಾಹಿತ್ಯ ಮತ್ತು ಆಧುನಿಕ ಅನುಸಂಧಾನ ಎಂಬ ವಿಚಾರಸಂಕಿರಣದಲ್ಲಿ ನಡೆದ ಮೊದಲ ಗೋಷ್ಠಿಯಲ್ಲಿ ಹಳಗನ್ನಡ ಸಾಹಿತ್ಯ– ಮರು ಸೃಷ್ಟಿಯ ಸವಾಲುಗಳು ಎಂಬ ವಿಚಾರದಲ್ಲಿ ಹಿರಿಯ ವಿದ್ವಾಂಸ **ಡಾ. ಪುರುಷೋತ್ತಮ ಬಿಳಿಮಲೆ**ಯವರು ಮಾಡಿದ ಭಾಷಣದ ವಿಸ್ತೃತ ಪ್ರಬಂಧವನ್ನು ಅಭಿಮತದ ಓದುಗರಿಗೆ ಮೂರು ಕಂತುಗಳಲ್ಲಿ ನೀಡಲಿದ್ದೇವೆ. ಆರಂಭದಲ್ಲಿ ಅವರು ಸಾಹಿತ್ಯ ಚರಿತ್ರೆಗಳನ್ನು ಬರೆಯುವ ಮುನ್ನ, ಅಥವಾ ಗ್ರಂಥ ಸಂಪಾದನಾ ಶಾಸ್ತ್ರ ಬೆಳೆಯುವ ಮುನ್ನ ನಮ್ಮ ಹಳಗನ್ನಡ ಸಾಹಿತ್ಯ ಜನರನ್ನು ಹೇಗೆ ತಲುಪುತ್ತಿತ್ತು ಎಂದು ವಿಶ್ಲೇಷಿಸುತ್ತಿದ್ದಾರೆ.

*ಸಂ.*

**ಕನ್ನಡ ಕಾವ್ಯ–ಗಮಕವಾಗಿ ಮರು ಸೃಷ್ಟಿ:**

ಹಾಡಲು ಅನುಕೂಲವಾಗುವಂತೆ ಮರುಸೃಷ್ಟಿಕೊಂಡ ಕನ್ನಡ ಕಾವ್ಯಗಳನ್ನು ಸಾಮಾನ್ಯ ಜನರಿಗೆ ಮುಟ್ಟಿಸುವಲ್ಲಿ ಗಮಕವು ಪ್ರಧಾನ ಪಾತ್ರ ವಹಿಸಿದೆ. ಗಮಕವು ಸಾಹಿತ್ಯಕ್ಕೆ ಸಂಗೀತವನ್ನು ಬೆರೆಸಿ ಅದರ ಮಾಧುರ್ಯವನ್ನು ಇಮ್ಮಡಿಗೊಳಿಸಿತು.

ಪ್ರಾಚೀನ ಸಂಗೀತಶಾಸ್ತ್ರಜ್ಞನಾದ ಶಾರ್ಙ್ಗದೇವನು (1230) ತನ್ನ ಸಂಗೀತರತ್ನಾಕರ ಗ್ರಂಥದಲ್ಲಿ ತಿಳಿಸಿರುವಂತೆ, ‘ಕೇಳುಗರಿಗೆ ಸುಖವೀಯುವ ರೀತಿಯಲ್ಲಿ ಸ್ವರಗಳನ್ನು ಕಂಪಿಸುವುದೇ ಗಮಕ, ವಾಚಸ್ಪತ್ಯ ಕೋಶದ ಪ್ರಕಾರ, ಸ್ಪಷ್ಟಪಡಿಸುತ್ತ, ಯಾವುದು ಮೂರ್ಛನಾದಿ (ಇಲ್ಲಿ ಮೂರ್ಛನಾ ಎಂದರೆ ಸಂಗೀತದಲ್ಲಿ ಸಪ್ತಸ್ವರಗಳ ಏರಿಳಿತಗಳ ಆಲಾಪನೆ. ಗಮಕ ಕಲೆಯಲ್ಲಿ ಪದ್ಯಗಳನ್ನು ಹಾಡುವಾಗ, ಆಯಾ ಸನ್ನಿವೇಶ–ರಸ–ಧ್ವನಿಗಳಿಗೆ ಸಂಬಂಧಿಸಿದಂತೆ ಆಯಾ ರಾಗಗಳಲ್ಲಿ ವಾಚಿಸುವುದರಿಂದ ಅದ್ಭುತ ಪರಿಣಾಮ ಮನದ ಮೇಲಾಗುವುದೆಂಬುವ ಅಂಶ) ಲಕ್ಷಣಗಳಿಂದ ತನ್ನನ್ನೇ ಹೊಂದಿಸುವುದೋ ಅದು ಗಮಕ”. ನಿಜಗುಣಶಿವಯೋಗಿ ತನ್ನ ವಿವೇಕ ಚಿಂತಾಮಣಿ ಕೃತಿಯಲ್ಲಿ –

ತಾನಮಾನಂದೋಱು ವಿಶ್ರಮಣನನಱಿದು ಪದನಂ ವ್ಯಕ್ತಿಗೈದು ಕೇಳ್ವರ ಕಿವಿಗೊಳಿಸಿ ಮೃದುಮಧುರ ವರ್ಣೋಚ್ಚಾರಣಂ ಮಾಳ್ಪರ್ ಗಮಕಿಗಳ್ ಎನ್ನುತ್ತಾನೆ.

ವಾಲ್ಮೀಕಿಯು ಬರೆದ ರಾಮಾಯಣವನ್ನು ಕುಶ ಲವರು ಹಾಡಿ, ವಶಿಷ್ಠರ ಆಶ್ರಮದಲ್ಲಿದ್ದ ಎಲ್ಲ ಮುನಿಗಳಿಗೆ ದಾಟಿಸಿದ್ದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಕನ್ನಡ ಶಾಸನಗಳು ಗಮಕವನ್ನು ಕೊಂಡಾಡಿರುವುದನ್ನು ಆರ್ ನರಸಿಂಹಾಚಾರ್ಯರೇ ಮೊದಲಾದ ವಿದ್ವಾಂಸರು ಗುರುತಿಸಿದ್ದಾರೆ.

ಕೆಳಗಿನ ಶಾಸನದಲ್ಲಿ ಕವಿಯನ್ನೂ ಗಮಕಿಯನ್ನೂ ಒಟ್ಟೊಟ್ಟಿಗೇ ಪ್ರಶಂಸಿಸಲಾಗಿದೆ.

ಕವಿಗಮಕಿ ವಾದಿ ವಾಗ್ಮಿಗ  
ಳವಿವೇಕದ ದೆಸೆಯನರಿಯರಾಶ್ರಿತ ಜನಮು  
ತ್ಸವದಿಂ ಬೇಡಲ್ಕೀವರ್  
ಸವಿಲಾಸಿಗಳ್ತೆ ಶಿವೆಯಗೇರಿಯನೂರ್ವರ್

(ಶಾಸನ ಪದ್ಯಮಂಜರಿ–ಪುಟ 147, ಪದ್ಯ 862)

ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಬರುವ ಮಾತುಗಳನ್ನು ಗಮನಿಸೋಣ–

ಕವಿ ಗಮಕಿ ವಾದಿ ವಾಗ್ಮಿ  
ಪ್ರವರರ ಪಂಡಿತರ ನೆಗಟ್ದಿ ಮಾತಱಿವರ ಸ  
ಬ್ಬವದವರೊಡನಂತೆಸೆದ  
ನ್ನವಾಸದೋಲಗದೊಳಿರ್ಪನಾಗಳ್ ಹರಿಗಂ

ಇಲ್ಲಿಯೂ ಕವಿ ಮತ್ತು ಗಮಕಿಗಳನ್ನು ಒಟ್ಟಿಗೇ ಉಲ್ಲೇಖಿಸಲಾಗಿದೆ.

ಪೊನ್ನನು ತನ್ನ ಶಾಂತಿಪುರಾಣ ಕಾವ್ಯದಲ್ಲಿ ತನ್ನನ್ನು ಪ್ರಶಂಸೆ ಮಾಡಿಕೊಂಡಿರುವ ಸಂದರ್ಭದ ಪದ್ಯವೊಂದರಲ್ಲಿ ಗಮಕಿಯ ವಿಚಾರ ಹೀಗೆ ನಿರೂಪಣೆಗೊಂಡಿದೆ :

ಇದಿರ್ಗೆ ಬರೆ ಪೊನ್ನಿಗಂ ಕಿಡಿ  
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ  
ತ್ವದ ಗಮಕಿತ್ವದ ವಾದಿ  
ತ್ವದ ವಾಗ್ಮಿತ್ವದ ಪೊಡರ್ಪುಮಂದರ್ಪಮುಮಂ

ಹರಿಹರ ತನ್ನ ನಂಬಿಯಣ್ಣನ ರಗಳೆಯಲ್ಲಿ ನಂಬಿಯಣ್ಣನು ‘ಗೇಯಗೋಷ್ಠಿ, ಗಮಕಿತ್ವದ ವಾಗ್ಮಿವೃಂದದೊಳ್’ ಇದ್ದನೆಂದು ಹೇಳುತ್ತಾನೆ. ವಾರ್ಧಿಕ ಷಟ್ಪದಿಯ ಸಾಧ್ಯತೆಗಳೆಲ್ಲವನ್ನೂ ಸೂರೆಗೊಂಡ ಲಕ್ಷ್ಮೀಶನಲ್ಲಿ ಸ್ಪಷ್ಟವಾಗಿ ಕವಿಗಮಕಿಗಳ ಕುರಿತ ಚಿತ್ರಣ ದೊರೆಯುತ್ತದೆ. ದುರ್ಗಸಿಂಹ ತನ್ನ ಕನ್ನಡ ಪಂಚತಂತ್ರದಲ್ಲಿ ಶ್ರೀಮಾದಿರಾಜ ಎಂಬುವವನನ್ನು ‘ಕವಿಗಮಕಿವಾದಿ ವಾಗ್ಮಿ ಪ್ರವರನೆಂದು’ ಕೊಂಡಾಡುತ್ತಾನೆ.

ಗಮಕಿಗಳಿಗೆ ಗುರುವಾದ ಕುಮಾರವ್ಯಾಸನೇ ಹೀಗೆ ಹೇಳಿದ್ದಾನೆ–

ನುಡಿದು ತಲೆದೂಗಿಸುವಮರೆಗ ।  
ನ್ನಡಕೆ ಹಾಹಾಯೆನಿಸಿ ಮೆಚ್ಚನು  
ಪಡೆವ ವಾಗ್ಮಿಗಳೋದಿ ಹೊಗಳಿಸಿಕೊಂಬ  
ಗಮಕಿಗಳು ॥

(ಕುಮಾರವ್ಯಾಸಭಾರತ – ಸಂಧಿ 8 – ಪದ್ಯ 38)

ಹಾಡಲೆಂದೇ ಬರೆಯಲಾದ ಕನಕದಾಸರ ಮೋಹನತರಂಗಿಣಿ ಯಲ್ಲಿ ಈ ಕೆಳಗಿನ ಸಾಲುಗಳು ಬರುತ್ತವೆ (3–40)

ರವಿ ಸಿದ್ಧಾಂತ ಪಾಠಕರಷ್ಟಭಾಷಾ ।  
ಕವಿ ಗಮಕಿಗಳು ತಾರ್ಕಿಕರು ।  
ವಿವಿಧ ವಿದ್ವತ್ಸಭೆ ನೆಱೆದುದು ಲಲಿತಾ  
ಭಾರ್ಗವಿಯ ಕಾಂತನ ಪುರದೊಳಗೆ

ಶಿವ ಪಾರಮ್ಯವನ್ನು ಮೆರೆದ ಭೀಮಕವಿಯ ಬಸವಪುರಾಣದಲ್ಲಿ ಕವಿಗಮಕಿವಾದಿ ವಾಗ್ಮಿಗಳ ಸಂಪೂರ್ಣ ಚಿತ್ರಣವಿದೆ.

ಪುರಂದರದಾಸರ ಒಂದು ಕೀರ್ತನೆಯಲ್ಲಿ

ತಾಳ ಬೇಕು । ತಕ್ಕ ಮೇಳ ಬೇಕು  
ಶಾಂತ ವೇಳೆ ಬೇಕು–ಗಾನವ ಕೇಳಬೇಕೆನ್ನುವಗೆ  
ಎಂಬ ವಿವರಣೆ ಬರುತ್ತದೆ.

ಒಡೆಯರ ಕಾಲದ ಗೋವಿಂದ ವೈದ್ಯನೆಂಬುವ ಕವಿ ತನ್ನ ಚಂಪುಕೃತಿ ಕಂಠೀರವ ನರಸರಾಜ ವಿಜಯದಲ್ಲಿ ಭಾರತಿಗಳು ರಂಜಿಸಿದರು ಎನ್ನುತ್ತಾನೆ. ಅಂದರೆ, ಅವನ ಕಾಲಕ್ಕೆ ಹಾಡುವ ಗಮಕಿಗಳಿದ್ದರು ಎಂಬುದು ಇದರ ಸೂಚನೆ. ಭಾರತಿನಂಜನ ಮೂಲಕ ರಾಜ ಇಡೀ ಕಾವ್ಯವನ್ನೆ ಹಾಡಿಸಿದನಂತೆ. ಹೀಗೆಯೇ ರತ್ನಾಕರವರ್ಣಿಯ ಭರತೇಶ ವೈಭವದಲ್ಲಿಯೂ ದಂಡಿಗೆ ಮಿಡಿಯುತ್ತ ಗಮಕಿ ಹಾಡಿದಳೆಂಬುವ ಅಂಶವು ಧ್ವನಿತಗೊಂಡಿದೆ.

ಹೀಗೆ ಕನ್ನಡದ ಬಹುತೇಕ ಕವಿಗಳು ಗಮಕಿಗಳನ್ನು ತಮ್ಮ ಜೊತೆಗಾರರಾಗಿಯೇ ಇರಿಸಿಕೊಂಡಿದ್ದಾರೆ. ತಮ್ಮ ಕಾವ್ಯವನ್ನು ಜನರಿಗೆ ಮುಟ್ಟಿಸುವವರು ಗಮಕಿಗಳು ಎಂಬ ವಿಷಯದಲ್ಲಿ ಹಳಗನ್ನಡ ಹಾಗೂ ನಡುಗನ್ನಡ ಕವಿಗಳ ನಡುವೆ ಭಿನ್ನಾಭಿಪ್ರಾಯ ಇರಲಿಲ್ಲ.

ಗಮಕದ ಕುರಿತು ಕನ್ನಡೆ ವಿಶ್ವಕೋಶ ಹೀಗೆ ಹೇಳುತ್ತದೆ–‘ಈ ಎಲ್ಲ ಅಂಶಗಳನ್ನೂ ಗಮನಿಸಿ, ಶ್ರದ್ಧಾಭಕ್ತಿಯಿಂದ ಕವಿಕೃತಿಯನ್ನು ಚೆನ್ನಾಗಿ ಅಭ್ಯಾಸ ಮಾಡಿ, ಅದರ ಸಂಪೂರ್ಣ ರಸಭಾವಗಳು ಶ್ರೋತೃಗಳಲ್ಲಿ ಉದ್ಬೋಧವಾಗುವಂತೆ ಮಾಡುವ ಗಮಕಿ ನಿಜವಾಗಿ ಆ ಹೆಸರಿಗೆ ತಕ್ಕವನಾಗುತ್ತಾನೆ. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತವೇ ಮೊದಲಾದ ನವರಸಗಳೂ ಮೂಡಿಬರುವಂತೆ ಮಾಡುವುದು ನಿಜವಾದ ವಾಚನ ವೈಖರಿಯ ಅಗ್ಗಳಿಕೆ. ಯತಿ, ಗಣ, ಪ್ರಾಸ ಇತ್ಯಾದಿಗಳನ್ನೂ ಷಟ್ಪದಿ, ಸಾಂಗತ್ಯ, ರಗಳೆ, ಶತಕ, ತ್ರಿಪದಿ, ಕಂದ ಮೊದಲಾದ ಛಂದೋವೈವಿಧ್ಯವನ್ನೂ ಗಮಕಿ ಅರಿತಿರಬೇಕು. ಸುಶ್ರಾವ್ಯವಾಗಿ ವಾಚನ

ಮಾಡಲು ಶ್ರುತಿ, ಗತಿಗಳನ್ನು ಅನುಸರಿಸಬೇಕು. ಸುಕಂಠದಿಂದ ಸ್ಫುಟವಾಗಿ ಕಾವ್ಯದ ನುಡಿಯನ್ನು ನಾಲಗೆಯಲ್ಲಿ ಕುಣಿಸಬೇಕು. ತಾನು ಆನಂದಪಟ್ಟು ವಾಚಿಸಿದಲ್ಲಿ ಕೇಳುವವರಿಗೂ ಆನಂದವಾಗುವುದು. ಅವರ ಹೃದಯವೂ ಮಿಡಿಯುವುದು. ಶ್ರುತಿಭೇದ, ರಾಗಭೇದ, ಸಂಗೀತದ ಸ್ವರಸ್ಥಾಯಿ, ಗಮಕ, ವರ್ಣ, ಕೃತಿಯ ಜೀವಾಳ – ಇವನ್ನು ತಿಳಿದುಕೊಳ್ಳದಿದ್ದರೆ ಗಮಕ ಹಿತವಾಗಿರುವುದಿಲ್ಲ. ಇನ್ನು ತಾಳದ ವಿಷಯ. ಪದ್ಯದ ಸಹಜವಾದ ಗತಿ, ಲಯ, ಏರಿಳಿತಗಳ ಕಡೆ ಗಮನವಿರಬೇಕು. ಎಲ್ಲಿ ಮುರಿಯಬೇಕು, ಎಲ್ಲಿ ನಿಲ್ಲಿಸಬೇಕು, ಎಲ್ಲಿ ನೆರವಲು ಮಾಡಬೇಕು ಎಂಬುದನ್ನರಿತು ಅರ್ಥವಾಗುವಂತೆ ಜಾಗೃತಿಯಿಂದ ಪದಗಳ ಜಾಡು ಹಿಡಿಯಬೇಕು. ವಾಚಿಸುವಾಗಲೇ ಅರ್ಥ ಮೂಡಬೇಕು. ಅಭಿನಯದ ಮುದ್ರೆಗಳ ಪರಿಚಯ ಪಡೆದುಕೊಂಡು ಸಮಯವರಿತು ಅವನ್ನು ಪ್ರಯೋಗ ಮಾಡುವುದು ಲೇಸು. ಸರಾಗದಿಂದ ಸುಮ್ಮನೆ ವಾಚನ ಮಾಡುವುದೂ ಗಮಕವೇ.

ಕನ್ನಡ ಸಾಹಿತ್ಯದಲ್ಲಿ ಬಗೆಬಗೆಯ ಕಾವ್ಯ ರಚನೆಯಾಗಿರುವುದರಿಂದ ಅವನ್ನು ಗಮಕಿಸುವ ರೀತಿಯೂ ಬಗೆಬಗೆಯಾಗಿದೆ. ಅದರ ಪ್ರಯೋಗವನ್ನು ಗಮಕಿಯಾದವನು ಸಾಧಿಸಬೇಕಾಗಿದೆ. ಮೊದಲು ಹಳೆಯ ಚಂಪುಕಾವ್ಯವನ್ನು ನೋಡಬಹುದು. ಅದರಲ್ಲಿ ಗದ್ಯ, ಪದ್ಯ ಮಿಶ್ರವಾಗಿರುತ್ತದೆ; ಕಂದ, ವೃತ್ತಗಳಿರುತ್ತವೆ. ಗದ್ಯವನ್ನು ಸ್ಫುಟವಾಗಿ ಸರಾಗವಾಗಿ ಓದಬೇಕು. ಅನೇಕ ವೃತ್ತಗಳಿಗೆ ಹಾಗೂ ಕಂದಕ್ಕೆ ತಾಳವಿಲ್ಲ. ಲಯವುಂಟು. ಅರ್ಥ ಕೆಡದಂತೆ, ನಿಲುಗಡೆ ಅರಿತು ಸೂಕ್ತ ರಾಗಗಳನ್ನು ಸಂಯೋಜಿಸಿ ಹಾಡಿದಾಗ ಮನರಂಜನೆಯಾಗುವುದು. ಆದಿಕವಿ ಪಂಪನ ಸಮಸ್ತಭಾರತವನ್ನೂ ಮಹಾಕವಿ ರನ್ನನ ಗದಾಯುದ್ಧವನ್ನೂ ವಾಚಿಸುವ ಬಗೆಯನ್ನು ಅರಿತುಕೊಳ್ಳಬೇಕು; ಜನ್ನನ ಯಶೋಧರ ಚರಿತೆ ಬರಿ ಕಂದಗಳಲ್ಲಿ ಬಂದಿದೆಯಾದರೂ ಸುಲಲಿತವಾಗಿದೆ, ಸುನಾದಮಯವಾಗಿದೆ. ವಿವಿಧ ರಾಗಗಳಲ್ಲಿ ಅದನ್ನು ಗಮಕಿಸಬಹುದು.

ಷಟ್ಪದಿ ಕಾವ್ಯಗಳಲ್ಲಿ ಕುಮಾರವ್ಯಾಸನ ಮಹಾಭಾರತ ಗಮಕಿಗಳ ಭಾಗ್ಯನಿಧಿ ಎನಿಸಿದೆ. ಕುಮಾರವಾಲ್ಮೀಕಿಯ ತೊರವೆ ರಾಮಾಯಣಕ್ಕೆ ಅನಂತರದ ಸ್ಥಾನ. ಇವೆರಡೂ ತುಂಬ ಜನಪ್ರಿಯವಾಗಿವೆ. ಭಾರತ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು ವಾಚನ ಮಾಡಿ ನಾಡಿನಾದ್ಯಂತ ಇವನ್ನು ಪ್ರಚಾರ ಮಾಡಿದ್ದಾರೆ. ಜನಸಾಮಾನ್ಯರು ಗುರುತಿಸಬಲ್ಲ ನವರಾಗಗಳೇ ಸಾಕು. ಆದ್ದರಿಂದ ಗಮಕಿಗೂ ಸಂಗೀತಾಭ್ಯಾಸ ಬಹಳ ಮುಖ್ಯ. ರಾಗಗಳ ಪರಿಚಯ, ಅವುಗಳನ್ನು ಇಂಪಾಗಿ ಹಾಡುವ ಯೋಗ್ಯತೆ ಅವನಿಗಿರಬೇಕಾಗುತ್ತದೆ. ಸಾಹಿತ್ಯದಲ್ಲಿ ಅಡಗಿರುವ ನವರಸಗಳನ್ನು ಗುರುತಿಸಿ ಅದನ್ನು ಪೋಷಿಸುವ ರಾಗಶಕ್ತಿಯನ್ನು ಗಮಕಿ ಗಳಿಸಿರಬೇಕಾಗುತ್ತದೆ.

ಛಂದಸ್ಸಿನ ವಿಚಾರಕ್ಕೆ ಬಂದರೆ ಕವಿಯು ತನ್ನ ಕೃತಿಯ ಪದ್ಯಗಳನ್ನು ಯಾವ ತಾಳಗತಿಯಲ್ಲಿ ನಡೆಸಿದ್ದಾನೆಂಬ ಅರಿವು ಗಮಕಿಗೆ ಅಗತ್ಯ. ತಾಳಯುತವಾಗಿ ವಾಚಿಸುವುದು ರೂಢಿಯಲ್ಲಿಲ್ಲದಿದ್ದರೂ ಕವಿಕೃತಿಯನ್ನು ವಾಚಿಸುವಾಗ ತಾಳಕ್ಕೆ ಆಧಾರವಾದ ಗತಿಯನ್ನು ಗುರುತಿಸಿ ಆ ಗತಿಯನ್ನು ಮೆರೆಸಬೇಕು. ಕವಿಗೆ ಸ್ಫೂರ್ತಿ, ಆವೇಶ ಬಂದಾಗ ಅವನ ಮಾತೂ ಲಯಬದ್ಧವಾಗುತ್ತದೆ, ರಾಗಬದ್ಧವಾಗುತ್ತದೆ. ಆಗ ಅವನ ಪದ್ಯಗಳು ಒಂದು ಗತಿಯಲ್ಲಿ ಅಳವಡುವಂತಾಗುತ್ತದೆ. ಅದನ್ನರಿತು ಗಮಕಿ ವಾಚಿಸಿದರೆ ವಾಚನದ ವೈಶಿಷ್ಟ್ಯ ಹೆಚ್ಚಾಗುವುದರೊಂದಿಗೆ ಕೃತಿಯ ಆಸ್ವಾದವೂ ಹೆಚ್ಚುತ್ತದೆ.

ಹೀಗೆ ಗಮಕಿಗಳು ಕನ್ನಡ ಕಾವ್ಯಗಳನ್ನು ಮರು ಸೃಷ್ಟಿಸಿ ಜನರಿಗೆ ತಲುಪಿಸಿದ್ದಾರೆ. ಸುಶ್ರಾವ್ಯತೆ, ಕಾವ್ಯದ ಅರ್ಥವಂತಿಕೆ, ರಸಾನುಭವ, ಭಾಷಾಸೌಂದರ್ಯ ಇವೆಲ್ಲದರ ಸಮರ್ಥ ಅಭಿವ್ಯಕ್ತಿಗೆ ಪೂರಕವಾದ ರಾಗ ಭಾವಗಳನ್ನು ಅಳವಡಿಸಿಕೊಂಡ ಗಮಕಿಗಳು ಆ ಮೂಲಕ ಕನ್ನಡ ಕಾವ್ಯಕ್ಕೆ ಹೊಸ ಆಯಾಮ ನೀಡಿದ್ದಾರೆ.



'ಮಂಕುತಿಮ್ಮನ ಕಗ್ಗ' ಗಮಕ ಕಾರ್ಯಕ್ರಮದಲ್ಲಿ ಜಲಜಾರಾಜು

ರಾಜರ ಆಸ್ಥಾನಗಳಲ್ಲಿ ಪಂಡಿತರಿಗೆ, ಕವಿಗಳಿಗೆ, ಸಂಗೀತಗಾರರಿಗೆ, ನೃತ್ಯಕಲಾವಿದರಿಗೆ ಮಾನ್ಯತೆಗಳಿದ್ದಂತೆಯೇ ಗಮಕಿಗಳಿಗೂ ಅತ್ಯುತ್ತಮ ಸ್ಥಾನಗಳಿದ್ದವು.

ಆದರೆ ಹಳಗನ್ನಡ–ನಡುಗನ್ನಡ ಕಾಲಘಟ್ಟಗಳಲ್ಲಿ ಯಾವ ಗಮಕಿಗಳು ನಮ್ಮ ಕಾವ್ಯಗಳನ್ನು ಹಾಡುತ್ತಿದ್ದರು ಎಂಬ ಕುರಿತು ಸದ್ಯಕ್ಕೆ ನಮ್ಮಲ್ಲಿ ಮಾಹಿತಿಗಳಿಲ್ಲ. ಸಾವಿರಾರು ಸಂಖ್ಯೆಯಲ್ಲಿರುವ ಕನ್ನಡ ಶಾಸನಗಳಲ್ಲಿ ಇಂಥವರ ಬಗ್ಗೆ ಮಾಹಿತಿಗಳಿದ್ದರೂ ಇರಬಹುದು. ಆದರೆ19–20ನೆಯ ಶತಮಾನದ ಅವಧಿಯಲ್ಲಿ ಕರ್ನಾಟಕದಲ್ಲಿ ಗಮಕಕಲೆ, ಕಾವ್ಯವಾಚನ ಕ್ಷೇತ್ರದಲ್ಲಿ ಶ್ರಮಿಸುತ್ತ ಈ ಪ್ರಾಚೀನ ಕಲೆಯನ್ನು ನಾಡಿನಾದ್ಯಂತ ಪ್ರಸಾರ ಮಾಡಿದ ಹಿರಿಯರನೇಕರು ಮಾಹಿತಿ ನಮಗೆ ದೊರೆಯುತ್ತದೆ. 1935ರಷ್ಟರ ಹಿಂದೆ ಭಾರತಕ್ಕೆ ಬಂದ ಡಚ್ ಸಂಗೀತ ಶಾಸ್ತ್ರಜ್ಞ ಬೆಳಗಾವಿಯಲ್ಲಿ ರನ್ನನ ಗದಾಯುದ್ಧವನ್ನು ರಾಗವಾಗಿ ಹಾಡುವುದನ್ನು ದಾಖಲಿಸಿದ್ದಾನೆ.. ಅಭಿನವ ಕಾಳಿದಾಸರೆಂದು ಪ್ರಸಿದ್ಧರಾಗಿದ್ದ ಬಸವಪ್ಪಶಾಸ್ತ್ರಿಗಳು (1843–91) ಗಮಕ ಕಲಾಕ್ಷೇತ್ರದಲ್ಲಿ ದೊಡ್ಡ ಹೆಸರು. ಇವರ ಗಮಕ ವಾಚನವನ್ನು ಕುರಿತಂತೆ ಹಿರಿಯ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರು ಹೀಗೆ ಹೇಳಿದ್ದಾರೆ–'ನನಗೆ ತಿಳಿದ ಹಾಗೆ ಭಾರತವನ್ನು ಈಚೆಗೆ ಚೆನ್ನಾಗಿ ಓದುತ್ತಿದ್ದವರು ಮೈಸೂರಿನಲ್ಲಿದ್ದ ಸುಪ್ರಸಿದ್ಧ ಬಸವಪ್ಪಶಾಸ್ತ್ರಿಗಳು. ಇವರು ಮೈಸೂರು ಶ್ರೀಮನ್ಮಹಾರಾಜರ ಆಸ್ಥಾನದಲ್ಲಿ ಕವಿಗಳಾಗಿದ್ದು ಅಭಿನವ ಕಾಳಿದಾಸ ಎಂಬುವ ಬಿರುದು ಪಡೆದಿದ್ದವರು. ಇವರಷ್ಟು ಚೆನ್ನಾಗಿ ಭಾರತವನ್ನು ಓದಿದವರನ್ನು ನಾನು ಕಂಡಿಲ್ಲ'.

ಬಸವಪ್ಪಶಾಸ್ತ್ರಿಗಳ ಶಿಷ್ಯೆ ಹಾಡಿನ ನಾಗಮ್ಮ ಉತ್ತಮ ಗಮಕಿಯೆನಿಸಿಕೊಂಡಿದ್ದರು. ಇನ್ನೂ ಎಷ್ಟು ಶಿಷ್ಯರನ್ನು ಶಾಸ್ತ್ರಿಗಳು ತಯಾರು ಮಾಡಿದ್ದರೆಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ.

ಆನಂತರದ ಕಾಲಘಟ್ಟದಲ್ಲಿ ಗಮಕದಲ್ಲಿ ಹೆಸರಾದವರು ಸಂಗೋಬಿಂದೂರಾಯರು (1877–1969). ಅವರು ಭಾರತದ ಬಿಂದೂರಾಯರೆಂದೇ ಪ್ರಸಿದ್ಧರಾಗಿದ್ದರು. ಸಾಹಿತ್ಯಕ್ಕೆ ಒತ್ತುಗೊಟ್ಟು ಸಂಗೀತವನ್ನು ರಸಭಾವಕ್ಕಾಗಿ ಮಾತ್ರ ಅಳವಡಿಸಿಕೊಳ್ಳುತ್ತ ಕಾವ್ಯವನ್ನು ಕೇಳುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುತ್ತಿದ್ದ ಬಿಂದೂರಾಯರ 'ಕುಮಾರವ್ಯಾಸ ಭಾರತ ಸಾರೋದ್ಧಾರ' ಎಂಬ ಕೃತಿಯು ಇಂದು ಗಮಕಿಗಳಿಗೆ ಆಕರ ಗ್ರಂಥವಾಗಿದೆ. ಅವರ ಹಾದಿಯಲ್ಲಿ ಹೆಜ್ಜೆ ಹಾಕಿದ ಮೈಸೂರಿನ ಭಾರತದ ಕೃಷ್ಣರಾಯರು, ಶಕುಂತಲಾಬಾಯಿ, ಪಾಂಡುರಂಗ ರಾವ್, ಎಂ.ಎಸ್. ಚಂದ್ರಶೇಖರಯ್ಯ, ಧಾರವಾಡದ ಸುಪ್ರಸಿದ್ಧ ಗವಾಯ್ ಗುರುರಾವ್ ದೇಶಪಾಂಡೆ ಮೊದಲಾದವರು ಗಮಕ ಕಲೆಯನ್ನು ಉಳಿಸಿ ಬೆಳೆಸಿದವರು. ಹೊಸ ರೀತಿಯಲ್ಲಿ ಹಾಡುತ್ತಿದ್ದ ಭಾರತ ಕೃಷ್ಣರಾಯರ ಕುರಿತು ಮಹಾ ಕವಿ ಕುವೆಂಪು ಅವರು 'ಹಾಡಿದನು ಗಮಕಿ, ನಾಡು ನಲಿದುದು ರಸದ ಕಡಲಿನಲಿ ಧುಮುಕಿ' ಎಂದು ಪ್ರಶಂಸಿಸಿದ್ದಾರೆ.

ಮೈಸೂರಿನಲ್ಲಿದ್ದ ತಲಕಾಡು ಮಾಯಿಗೌಡರು, ಜವಳಿ ಅಂಗಡಿ ತಮ್ಮಯ್ಯ ನವರು, ಅನೇಕ ಗ್ರಂಥಗಳನ್ನು ಬರೆದ ಮೈಸೂರು ರಾಘವೇಂದ್ರರಾಯರು, ಕಳಲೆ ಸಂಪತ್ಕುಮಾರಾಚಾರ್ಯರು, ಗೌರೀದೇವುಡು ನರಸಿಂಹಶಾಸ್ತ್ರೀ ಅವರು, ಮೈ.ಶೇ. ಅನಂತಪದ್ಮನಾಭರಾವ್, ಜೋಳದರಾಶಿ ದೊಡ್ಡನಗೌಡರು, ಅನಂತಪದ್ಮನಾಭಯ್ಯ, ಕೆ.ಎ. ವೆಂಕಟಸುಬ್ಬಯ್ಯ ವ್ಯಾಖ್ಯಾನಕಾರ ಕ.ಲಿ. ವೈದ್ಯನಾಥನ್, ಮಾಲೂರಿನ ಟಿ. ವೆಂಕಟಪ್ಪನವರು, ಗಮಕ ರೂಪಕಗಳೆಂಬ ಹೊಸ ಪ್ರಕಾರವನ್ನು ಸೃಜಿಸಿದ ಹು.ಮ. ರಾಮಾರಾಧ್ಯರು, ಸರೋಜಮ್ಮ ಅನಂತರಾಮಯ್ಯ, ಮತ್ತೂರಿನ ರಾಮಾಶಾಸ್ತ್ರಿಗಳು, ಲಕ್ಷ್ಮೀಕೇಶವ ಶಾಸ್ತ್ರಿಯವರು, ಮತ್ತೂರು ಕೃಷ್ಣಮೂರ್ತಿಯವರು ಹೀಗೆ ಸುಮಾರು 500 ಕ್ಕೂ ಹೆಚ್ಚಿನ ಸಂಖ್ಯೆಯ ಗಮಕಿಗಳು ಕನ್ನಡ ಕಾವ್ಯಗಳನ್ನು ಗಮಕದ ಮೂಲಕ ಉಳಿಸಿದ್ದಾರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇವರಿಗೆ ಅರ್ಹವಾದ ಸ್ಥಾನವೊಂದು ಸಿಗಲೇ ಬೇಕು.

## ಗಮಕದಿಂದ ಹರಿಕತೆಯ ಕಡೆಗೆ:

ಕಾವ್ಯಗಳನ್ನು ಕುಳಿತು ಹಾಡುತ್ತಾ ಅದಕ್ಕೆ ಸರಳವಾದ ಅರ್ಥ ವಿವರಣೆ ಮಾಡುವ ಜನರನ್ನು ತಲುಪಿದ ಗಮಕ ಪರಂಪರೆಯನ್ನು ಹರಿಕತಾ ಪರಂಪರೆಯು ಇನ್ನಷ್ಟು ವಿಸ್ತರಿಸಿತು. ಹರಿಕತೆಯು ಒಂದು ಅರೆ ಜಾನಪದ ಕಲೆ.

ಕನ್ನಡ ಶಾಸನಗಳಲ್ಲಿ ಹಾಗೂ ಕಾವ್ಯಗಳಲ್ಲಿ ಹರಿಕತೆಯ ಉಲ್ಲೇಖ ಬರುತ್ತದೆ. ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಹರಿಕತೆ ನಡೆಯುತ್ತದೆ. ಹೆಸರು ಸೂಚಿಸುವಂತೆ ಇದು ವೈಷ್ಣವ ಪರಂಪರೆಗೆ ಸೇರಿದ್ದರೂ ಅದರಲ್ಲಿ ಹೇರಳವಾಗಿ ಶಿವ ಕತೆಗಳೂ ಸೇರಿಕೊಂಡಿದ್ದುವು. 12ನೆಯ ಶತಮಾನದ ಶೈವ ಗುರುಗಳೊಬ್ಬರು ಶಿವಧರ್ಮ ಕಥಾಕಥನ ಮಾಡುತ್ತಿದ್ದರೆಂದು ಡಾ. ಚಿದಾನಂದ ಮೂರ್ತಿ ಅವರು ತಮ್ಮ ಹೊಸತು ಹೊಸತು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಕಥಾಕಥನವು ಹರಿಕತೆಯೋ ತಿಳಿಯದು. ಏನಿದ್ದರೂ ಹರಿಕತೆಯ ಬಗ್ಗೆ ನಿರ್ವಿವಾದವಾದ ಉಲ್ಲೇಖ ದೊರೆಯುವುದು 15ನೇ ಶತಮಾನದ ಹರಿದಾಸರಾದ ಶ್ರೀಪಾದ ರಾಯರಲ್ಲಿ. 'ತಾಳ ತಂಬೂರಿಗಳಿಂದ ಕಾಲ ಗೆಜ್ಜೆ ದನಿಗಳಿಂದ' ಎಂಬ ಅವರು ಸಾಲು ಹರಿದಾಸರೊಬ್ಬರ ವರ್ಣನೆಯೇ ಆಗಿದೆ.

ಪುರಂದರ ದಾಸರಂತೂ ಹರಿಕತೆ ಕೇಳಲು ಬಂದ ಸಾಮಾನ್ಯ ಪ್ರೇಕ್ಷಕರ ಒಳ್ಳೆಯ ವಿವರ ನೀಡುತ್ತಾರೆ–

ಹರಿಕತೆ ಕೇಳುವ ಪರಿಜನರು ಈ
ಪರಿಯ ಪುರಾಣಕ್ಕೆ ಸರಿದು ಕುಳ್ಳಿರುವವರು
ನೆಲ್ಲು ಒಣಗಲಿಲ್ಲ, ಹಲ್ಲು ನೋವು ಘನ್ನ
ಕಲ್ಲು ಹೋಗದು ಎನ್ನ ಕೈಲೆಂದು
ಪುಲ್ಲ ನಾಭನ ಕತೆ ಪೂರೈಸಿ ಕೇಳದೆ
ಕಲ್ಲ ಗೋವಿನ ಹಾಲ ಕರುವು ಬಯಸುವಂತೆ

ಅವರ ಇನ್ನೊಂದು ಕೀರ್ತನೆಯಲ್ಲಿ ಹರಿಕತೆ ಆ ಕಾಲಕ್ಕೆ ಎಷ್ಟೊಂದು ಜನಪ್ರಿಯವಾಗಿತ್ತೆಂಬುದರ ಕುರಿತು ಸೂಚನೆ ನೀಡುತ್ತದೆ–

ಪರರ ನಿಂದೆಗಳ ಬಿಡದೆ ಕಾಪಾಡುವ
ಮರೆತನೆ ಮನೆಯ ಬಾಗಿಲು ಹಾಕಲು
ಕರುವ ಕಟ್ಟಲಿಕೆ ಮರೆತು ಬಂದೆನೆಂಬ ಈ
ಪರಿಯ ಪುರಾಣಕ್ಕೆ ನೆರೆದು ಕುಳ್ಳಿರುವರು

ಕನಕದಾಸರು ಕೂಡಾ 'ಮುಟ್ಟಬೇಡ ಮುಟ್ಟ ಬೇಡ ಮುರಹರ ದಾಸರನು, ...ಹರಿಕತಾ ಪ್ರಸಂಗದವರನು' ಎಂದು ಹೇಳುತ್ತಾನೆ. ಹರಿಕತೆ ಕೇಳಲು ಬಂದ ಜನರು ಪಾದರಕ್ಷೆಗಳು ಕಳುವಾಗುತ್ತಿದ್ದುದನ್ನು ವಿಜಯದಾಸರೂ ಉಲ್ಲೇಖಿಸಿದ್ದಾರೆ. (ಪಾಪೋಸು ಪೋದುವಲ್ಲಾ). ಕ್ರಿಸ್ತ ಶಕ 1650 ರಲ್ಲಿದ್ದ ಶಾಂತವೀರ ದೇಶಿಕನು ತನ್ನ ಶಿವಲಿಂಗ ಚಾರಿತ್ರ್ಯ ದಲ್ಲಿ ಭಕ್ತರ ಮನೆಗಳಲ್ಲಿ ಹಾಗೂ ರಾಜಾಸ್ಥಾನಗಳಲ್ಲಿ ಪುರಾತನರ ಕಥನ ನಡೆಯುತ್ತಿದ್ದುದನ್ನು ಸ್ಮರಿಸಿಕೊಂಡಿದ್ದಾನೆ.

ಈ ಹರಿದಾಸರುಗಳು ಕನ್ನಡ ಕಾವ್ಯಗಳನ್ನು ಮರುಸೃಷ್ಟಿಸಿ ಜನರಿಗೆ ತಲುಪಿಸಿದ ರೀತಿಯ ಕುರಿತು ನಾವು ಇನ್ನಷ್ಟೇ ಗಂಭೀರವಾದ ಅಧ್ಯಯನ ನಡೆಸಬೇಕಾಗಿದೆ. ಹೆಚ್ಚಿನ ಹರಿದಾಸರಿಗೆ ಕುಮಾರವ್ಯಾಸ ಭಾರತ, ಜೈಮಿನಿ ಭಾರತ ಹಾಗೂ ತೊರವೆಯ ರಾಮಾಯಣವೇ ಮೂಲ ಆಕರ. ಅದರಿಂದ ಸ್ತುತಿ ಪದ್ಯಗಳನ್ನೂ ಮುಖ್ಯ ಕತಾಭಾಗಗಳನ್ನು ಆಯ್ದುಕೊಳ್ಳುವ ಇವರು ಕತೆಯನ್ನು ಪ್ರಸ್ತುತ ಪಡಿಸುವಾಗ ಅದಕ್ಕೆ ಬೇಕಾದಲ್ಲಿಂದ ಉಪ ಕತೆಗಳನ್ನು ಸೇರಿಸಿಕೊಳ್ಳುತ್ತಿದ್ದರು. ಈ ಉಪಕತೆಗಳು ಹಳಗನ್ನಡದಿಂದಲೋ, ನಡುಗನ್ನಡಗಳಿಂದಲೋ, ಇಲ್ಲ ಸಮಕಾಲೀನ ಸಮಾಜದಿಂದಲೋ ಬರಬಹುದಿತ್ತು. ಹೀಗಾಗಿ ನಿರೂಪಣೆಯಲ್ಲಿ ಕನ್ನಡ ಕಾವ್ಯಗಳು ಹಿಗ್ಗಿ ವಿಸ್ತಾರವಾಗುತ್ತಿದ್ದುವು. ಹಂಪಿಯಲ್ಲಿ ನಾನು ಭೇಟಿ ಮಾಡಿದ ಲಕ್ಷ್ಮಣದಾಸ ಎಂಬ ಹರಿದಾಸರೊಬ್ಬರು ಹೇಳುತ್ತಿದ್ದ ಹರಿಕತೆ ಹಾಡುಗಳಲ್ಲಿ ಶಿಶುನಾಳ ಶರೀಫರ ತತ್ವಪದಗಳೊಂದಿಗೆ ಪುರಂದರದಾಸರ ಕೀರ್ತನೆಯ ಸಾಲು ಸೇರಿಕೊಂಡು, 'ಕೂಡಲ ಸಂಗಮದೇವಾ' ಎಂದು ಕೊನೆಗೊಳ್ಳುತ್ತಿತ್ತು. ಸುಮಾರು ಏಳು ನೂರು ವರ್ಷಗಳ ಅವಧಿಯಲ್ಲಿ ರಚಿತವಾದ ಪಠ್ಯಗಳಿಂದ ತಮಗೆ ಬೇಕಾದ ಸಾಲುಗಳನ್ನು ಆರಿಸಿಕೊಂಡು ನಮ್ಮ ಕಾಲಕ್ಕೆ ಬೇಕಾದ ಪಠ್ಯವೊಂದನ್ನು ಹರಿಕತೆಯವರು ಸೃಜಿಸುತ್ತಾರೆ. ಕುಮಾರವ್ಯಾಸ, ಜೈಮಿನಿ ಭಾರತ, ತೊರವೆ ರಾಮಾಯಣ, ಪ್ರಭುಲಿಂಗ ಲೀಲೆ, ವಚನಗಳು, ದಾಸರು ಕೀರ್ತನೆಗಳು, ಜನಪದ ಹಾಡುಗಳೆಲ್ಲ ಹರಿದಾಸರ ನಿರೂಪಣೆಯೊಂದರಲ್ಲಿ ಸಮ್ಮಿಳಿತವಾಗುವ ಸೋಜಿಗವೊಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಂಭವಿಸಿದೆ. ನಾನು ಎಂಟನೆ ತರಗತಿ ಓದುತ್ತಿದ್ದಾಗ (1968) ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪಂಜ ಪ್ರೌಢ ಶಾಲೆಗೆ ಆಗಮಿಸಿದ್ದ ಹರಿದಾಸರು ಕರ್ಣ ಬೇಧನ ಹರಿಕತೆ ಮಾಡಿದ್ದರು. ಅದರಲ್ಲಿ ಪಂಪನ ಕಾವ್ಯದ ಸಾಲುಗಳೊಂದಿಗೆ ಮುಂದಿನ ಅನೇಕ ಮಹಾಭಾರತಗಳ ಸಾಲುಗಳೆಲ್ಲ ಸೇರಿಕೊಂಡದ್ದನ್ನು ನಾನು ಆ ಮೇಲಿನ ದಿನಗಳಲ್ಲಿ ನೆನಪಿಸಿಕೊಂಡೆ.

## ಕನ್ನಡ ಕಾವ್ಯಗಳು ಮಧ್ಯಕಾಲೀನ ದೇವಳಗಳ ಗೋಡೆಗಳಲ್ಲಿ:

ಈ ಗಮಕ ಮತ್ತು ಹರಿಕತೆಗಳು ಹೆಚ್ಚಾಗಿ ನಿರೂಪಣೆಗೊಳ್ಳುತ್ತಿದ್ದುದು ಭಕ್ತರ ಮನೆಗಳಲ್ಲಿ ಹಾಗೂ ದೇವಸ್ಥಾನಗಳ ಜಗಲಿಗಳಲ್ಲಿ. (ಅದು ಈಗಲೂ ಹಾಗೆಯೇ ಮುಂದುವರಿದಿದೆ, ಮತ್ತು ಶಾಲೆಗಳು ಅದಕ್ಕೆ ಸೇರಿಕೊಂಡಿವೆ. ದಕ್ಷಿಣ ಕನ್ನಡ ಜಿಲ್ಲೆಯ ಪಂಜ ಪಂಚಲಿಂಗೇಶ್ವರ ದೇವಸ್ಥಾನ, ಸುಳ್ಯದ ಚನ್ನಕೇಶವ ದೇವಸ್ಥಾನ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ, ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಹರಿಕತೆಗಳಿಗೆ ನಾನು ತಪ್ಪದೆ ಹೋಗುತ್ತಿದ್ದೆ. ಇಲ್ಲಿ ಸೇರುತ್ತಿದ್ದ ಜನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದಂತೆ, ಜಗಲಿಗಳೂ ದೇವಸ್ಥಾನಗಳ ನವರಂಗಗಳೂ ವಿಸ್ತರವಾಗುತ್ತಾ ಹೋದುವು.

ಈ ಅರ್ಥದಲ್ಲಿ ಕನ್ನಡ ಕಾವ್ಯವು ಪರೋಕ್ಷವಾಗಿ ಗಮಕ ಮತ್ತು ಹರಿಕತೆಗಳ ಮೂಲಕವಾಗಿ ಮಧ್ಯಕಾಲೀನ ಕರ್ನಾಟಕದ ವಾಸ್ತು ಮತ್ತು ಶಿಲ್ಪದೊಡನೆ ಸಂಬಂಧ ಸಾಧಿಸಿದೆ.

## ದೇವಳಗಳ ಅಲಂಕರಣಶೀಲ ಸೂಕ್ಷ್ಮ ಕೆತ್ತನೆಗಳಲ್ಲಿ ಕನ್ನಡ ಕಾವ್ಯಗಳಿವೆ.


ದೇವಾಲಯಗಳ ಬಾಗಿಲುವಾಡಗಳ ಹಾಗೂ ಹೊರ ಗೋಡೆಗಳಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಪಾತ್ರಗಳು ಕಾಣಿಸಿಕೊಂಡಿರುವುದು ಕುಮಾರವ್ಯಾಸ ಭಾರತ ಹಾಗೂ ತೊರವೆ ರಾಮಾಯಣಗಳಿಂದಲೇ ಎಂಬ ಬಗ್ಗೆ ನನ್ನಲ್ಲಿ ಯಾವ ಸಂಶಯವೂ ಇಲ್ಲ. ಸುಂದರ ಹೂಬಳ್ಳಿಗಳು, ಲತಾಗುಲ್ಮಗಳು, ಅವುಗಳ ಮಧ್ಯೆ ಸೂಕ್ಷ್ಮ ಪ್ರಾಣಿಪಕ್ಷಿಗಳು, ವಿರಳವಾಗಿ ಕಾಣಿಸುವ ದೇವಗಣ–ಮಾನವಗಣಗಳ ಕೆತ್ತನೆಗಳು ಪಂಪನ ಕಾವ್ಯದಲ್ಲಿಯೇ ಕಂಡುಬರುತ್ತವೆ. ದೇವಸ್ಥಾನಗಳ ಒಳಗೆ ತುಂಬ ಹೊತ್ತು ಕುಳಿತು ಗಮಕವನ್ನೋ ಹರಿಕತೆಯನ್ನೋ ಕೇಳಲು ಅನುಕೂಲವಾಗುವಂತೆ ದೇವಾಲಯದ ಒಳಭಾಗಕ್ಕೆ ಸಾಕಷ್ಟು ಗಾಳಿ ಬೆಳಕುಗಳನ್ನು ಪೂರೈಸಲು ಕ್ರಮಗಳನ್ನು ಕೈಗೊಳ್ಳಲಾಯಿತು. ಅದಕ್ಕಾಗಿ ಮುಖಮಂಟಪದ ಗೋಡೆಗಳ ಮೇಲ್ಭಾಗದಲ್ಲಿ ಕಲ್ಲಿನ ಜಾಲಂಧ್ರಗಳನ್ನು ಇರಿಸಲಾಯಿತು. ದೇವಾಲಯಗಳ ಹೊರವಲಯದ ನಕ್ಷತ್ರಾಕಾರದ ತಲವಿನ್ಯಾಸದ ಮೇಲೆ ನಿಂತಿರುವ ಗೋಡೆಗಳಲ್ಲಿ ಬಗೆ ಬಗೆಯ ಶಿಲ್ಪಗಳನ್ನು ಕೆತ್ತಲಾಯಿತು. ಗುಡಿಗೆ ಬಂದ ಭಕ್ತರು ಗೋಡೆಗಳ ಹೊರಮೈ ಮೇಲೆ ರೂಪಿಸಲಾಗಿದ್ದ ಅಪೂರ್ವ ಸೌಂದರ್ಯಯುತ ದೇವ ದೇವಿಯರ ಪ್ರತಿಮೆಗಳನ್ನೂ, ಪೌರಾಣಿಕ ಘಟನೆಗಳನ್ನೂ ನೋಡುತ್ತಾ ಕಾವ್ಯದ ಸೊಬಗನ್ನು ಮತ್ತೆ ಸವಿಯಬಹುದಾಗಿತ್ತು.

ಒಟ್ಟು ದೇವಾಲಯದ ಸುತ್ತಲೂ ಗೋಡೆಯ ಕೆಳಭಾಗದಲ್ಲಿ ಮುಂಚಾಚಿದ ಪಟ್ಟಿಕೆಗಳ ಮೇಲೆ ಆನೆ, ಕುದುರೆ ಸವಾರರು, ಲತಾ ತೋರಣ, ಸಿಂಹಮುಖ, ಮತ್ತೆ ಅದರ ಮೇಲೆ ಕಣ್ಣಿನ ಎತ್ತರದಲ್ಲಿರುವ ಪಟ್ಟಿಕೆಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತಿತರ ಪೌರಾಣಿಕ ಕಥೆಗಳು ಮತ್ತು ವಿರಳವಾಗಿಯಾದರೂ ಕೆಲವು ಸಾಮಾಜಿಕ ಮತ್ತು ಧಾರ್ಮಿಕ ಜೀವನಗಳನ್ನು ನಿರೂಪಿಸಿರುವ ಮಾನವರ ಚಿತ್ರಗಳನ್ನೂ ಬಿಡಿಸಲಾಗಿರುತ್ತದೆ. ಈ ಪಟ್ಟಿಕೆಗಳಲ್ಲಿ ಕಾಣ ಸಿಗುವ ಪಂಚ ತಂತ್ರದ ಕತೆಗಳು ದುರ್ಗ ಸಿಂಹನ ಪಂಚ ತಂತ್ರದಿಂದಲೇ ಬಂದಿರಬೇಕು ಎಂದು ನಾನು ಭಾವಿಸುತ್ತೇನೆ. ಇವತ್ತಿಗೆ ಕೂಡಾ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಉಳಿದು ಬಂದಿರುವ ಕೆಲವು ದೇವಸ್ಥಾನಗಳಲ್ಲಿ ಕನ್ನಡ ಕಾವ್ಯ ಮರುಸೃಷ್ಟಿ ಹೊಂದಿದ ಬಗೆಯನ್ನು ನಾವು ಎಚ್ಚರದಿಂದ ಅಭ್ಯಾಸ ಮಾಡಬೇಕಾಗಿದೆ. ಆ ಕಾಲದಲ್ಲಿ ಹುಟ್ಟಿಕೊಂಡ ಜೈನ ಬಸದಿಗಳೂ ಕೂಡಾ ಕನ್ನಡ ಜೈನ ಪುರಾಣಗಳಿಂದ ಪ್ರಭಾವಿತವಾಗದೇ ಉಳಿಯಲು ಸಾಧ್ಯವಿಲ್ಲ. ಶ್ರವಣ ಬೆಳಗೊಳಕ್ಕೂ, ಚಾವುಂಡ ರಾಯನಿಗೂ, ವಡ್ಡಾರಾಧನೆಗೂ ಹಾಗೂ ತ್ರಿಶಷ್ಟಿ ಶಲಾಕಾ ಮಹಾಪುರಾಣಕ್ಕೂ ಇರುವ ಸಂಬಂಧವನ್ನು ನಾವೀಗ ಸೂಕ್ಷ್ಮವಾಗಿ ವಿವರಿಸಿಕೊಳ್ಳಬೇಕಾಗಿದೆ. ಕನ್ನಡದಲ್ಲಿ ಅನೇಕ ತೀರ್ಥಂಕರರು ಆಗಮಿಕ ಕಾವ್ಯದ ನಾಯಕರಾಗಿದ್ದಾರೆ. ಅದೇ ತೀರ್ಥಂಕರರು ಕನ್ನಡದ ಬಸದಿಗಳಲ್ಲಿ ಮರುಸೃಷ್ಟಿ ಹೊಂದಿದ್ದಾರೆ. ಕಾರ್ಕಳದಲ್ಲಿರುವ ನೇಮಿನಾಥ ಬಸದಿಗೂ, ಗೊಮ್ಮಟನಿಗೂ, ಆದಿ ಪುರಾಣ ಹಾಗೂ ಭರತೇಶ ವೈಭವಕ್ಕೂ ಇರುವ ಅಂತರ್ ಸಂಬಂಧಗಳನ್ನು ನಾವು ಮರೆಯುವಂತಿಲ್ಲ.

ಶಿಲ್ಪದ ಹಾಗೆಯೇ ರಾಮಾಯಣ ಮತ್ತು ಮಹಾಭಾರತ ಸಂಬಂಧೀ ವರ್ಣ ಚಿತ್ರಗಳು ಕೂಡಾ ದೇವಾಲಯಗಳ ಒಳ ಗೋಡೆಗಳಲ್ಲಿ ಕಾಣಿಸಿಕೊಂಡುವು. ಹಂಪಿಯ ವಿರೂಪಾಕ್ಷ ದೇವಸ್ಥಾನದ ನವರಂಗದ ಮೇಲ್ಭಾಗದಲ್ಲಿ ಕಾಣಿಸುವ ಗಿರಿಜಾ ಕಲ್ಯಾಣದ ಚಿತ್ರಕ್ಕೂ ಅಲ್ಲಿಯೇ ಓಡಾಡಿಕೊಂಡಿದ್ದ ಹರಿಹರನ ಗಿರಿಜಾ ಕಲ್ಯಾಣ ಕಾವ್ಯಕ್ಕೂ ಸಂಬಂಧವೇ ಇಲ್ಲವೆಂದು ಹೇಳುವುದಾದರೂ ಹೇಗೆ? ಅ

***ಡಾ. ಪುರುಷೋತ್ತಮ ಬಿಳಿಮಲೆ***

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)*




# ಮೈ ಫಸ್ಟ್ ಜರ್ನಿ ಕೃತಿ ಬಿಡುಗಡೆ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕನ್ನಡೇತರ ವಿದ್ಯಾರ್ಥಿನಿಯಾದ ಕುಮಾರಿ ಹರಿತಿಕಾ ಶರ್ಮ ಅವರ 'ಮೈ ಫಸ್ಟ್ ಜರ್ನಿ' ಕನ್ನಡ ಅನುವಾದಿತ ಕವನ ಸಂಕಲನ ಕೃತಿ ಬಿಡುಗಡೆ ಕಾರ್ಯಕ್ರಮ ಇದೇ ಜುಲೈ 28ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವಿಚಾರ ಸಂಕಿರಣ ಭವನದಲ್ಲಿ ನಡೆಯಿತು.

ಶಿಕ್ಷಣ ತಜ್ಞರು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಪ್ರೊ. ವೆಂಕಟಾಚಲ ಜಿ. ಹೆಗಡೆ ಅವರು ಕೃತಿ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು ತನ್ನದಲ್ಲದ ಭಾಷೆಯನ್ನು ಅಷ್ಟೊಂದು ಸರಾಗವಾಗಿ ಕಲಿಯುವುದು ಸುಲಭವಲ್ಲ. ಆದರೆ ಆಸಕ್ತಿ, ಪರಿಶ್ರಮವಿದ್ದರೆ ಅದು ಅಸಾಧ್ಯವೂ ಅಲ್ಲ. ಇದಕ್ಕೆ ನಿದರ್ಶನವೇ 'ಮೈ ಫಸ್ಟ್ ಜರ್ನಿ' ಕೃತಿಯನ್ನು ಬರೆದ ಕು. ಹರಿತಿಕಾ ಶರ್ಮ. 'ಸಮಯವಿಲ್ಲ' ಎನ್ನುವ ಈ ಕಾಲದಲ್ಲಿ ಹೊಸತಾದ ಭಾಷೆಯನ್ನು ಕಲಿತು ಅದರಲ್ಲಿ ಕವಿತೆಗಳನ್ನು ಈ ವಿದ್ಯಾರ್ಥಿನಿಯು ರಚಿಸಿರುವುದು ಪ್ರಶಂನೀಯ. ಹಾಗಾಗಿ ಇಂತವರೇ ನಮ್ಮ ದೆಹಲಿಯ ನಿಜವಾದ ಕನ್ನಡ ರಾಯಭಾರಿಗಳು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತಾಡುತ ಇಂದಿನ ಯುವ ಸಮಾಜದಲ್ಲಿ 99%ರಷ್ಟು ಜನರು ಫೇಸ್‌ಬುಕ್, ವಾಟ್ಸ್‌ಆ್ಯಪ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಮುಳುಗುತ್ತಿರುವ ಇಂತಹ ಸಂದರ್ಭದಲ್ಲಿ ಕಲೆ, ಸಾಹಿತ್ಯದ ಕಡೆ ಮುಖ ಮಾಡಿದವರನ್ನು ನಾವು ಗುರುತಿಸಲೇಬೇಕು. ಅದರಲ್ಲೂ ಕನ್ನಡೇತರ ವಿದ್ಯಾರ್ಥಿನಿಯಾಗಿದ್ದು ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಕುರಿತಾಗಿ ಒಲವನ್ನು ಹೊಂದಿ ಕನ್ನಡದಲ್ಲಿ ಬರೆಯಲು ಆಸಕ್ತಿ ತೋರಿರುವುದು ಸಾಧನೆ ಮಾತ್ರವಲ್ಲ, ಅಭಿನಂದನೀಯ ವಿಚಾರ ಕೂಡಾ. ಕೃತಿ ಎಷ್ಟು ಮೌಲಿಕವಾಗಿದೆಯೋ ಎನ್ನುವುದಕ್ಕಿಂತ ಕೃತಿ ಎಷ್ಟು ಪ್ರಾಮುಖ್ಯತೆ ಪಡೆದಿದೆ ಎಂಬುವುದನ್ನು ಗಮನಿಸಬೇಕು. ಇಂತಹ ಪ್ರತಿಭೆಗಳಿಗೆ ಸಂಸ್ಥೆಯು ಸದಾ ಪ್ರೋತ್ಸಾಹವನ್ನು ನೀಡುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಆರ್. ಉಪಾಧ್ಯಕ್ಷರಾದ ಶ್ರೀ ಕೆ.ಆರ್. ರಾಮಮೂರ್ತಿ, ವ್ಯವಸ್ಥಾಪಕರಾದ ಶ್ರೀ ಶಿವಾನಂದ ಸಿರ್ಸಿಕರ್, ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯ ಕುಮಾರಿ ಅವರು ಹಾಗೂ ಶಿಕ್ಷಕ–ಶಿಕ್ಷಕೇತರ ವೃಂದದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು. ಮಹೇಶ್ ಸ್ವಾಗತಿಸಿದರು. ಕು. ಶ್ರೇಷ್ಠಾ ತೇಲಿ ವಂದಿಸಿದರು. ಶ್ರೀಮತಿ ಎಂ. ಎಸ್. ಲಾವಣ್ಯ ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು. ಅ

***ಅರವಿಂದ ಬಿಜೈ***



## ಭಿವಾಡಿ ಕನ್ನಡಿಗರ ಬಳಗದಿಂದ ಶ್ರೀ ಸತ್ಯನಾರಾಯಣ ಪೂಜೆ

ಭಿವಾಡಿ ಕನ್ನಡ ಬಳಗದ ದ್ವಿತೀಯ ವರ್ಷದ ಶ್ರೀ ಸತ್ಯನಾರಾಯಣ ಸ್ವಾಮಿಯ ಪೂಜೆಯು ಭಿವಾಡಿಯ ಟ್ರೇಹಾನ್ ಹಿಲ್‌ವ್ಯೂ ಗಾರ್ಡನ್‌ನ ಕಮ್ಯೂನಿಟಿ ಸೆಂಟರ್‌ನಲ್ಲಿ ಇದೇ ಜುಲೈ 22ರಂದು ವಿಜೃಂಭಣೆ ಹಾಗೂ ಸಂಭ್ರಮದಿಂದ ನೆರವೇರಿತು. ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಶ್ರೀ ಕೆ.ಎಸ್.ಜಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಡಾ. ಎಂ.ಎಸ್. ಶಶಿಕುಮಾರ್ ಹಾಗು ಗುರ್‌ಗಾಂವ್ ಕನ್ನಡ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಡಿ.ವಿ.ಎಸ್. ಮೂರ್ತಿಯವರೂ ಅಲ್ಲದೆ ಜೈಪುರದಿಂದ ಶ್ರೀ ಕೆ.ಎಸ್. ಪ್ರಸಾದ ಮೊದಲಾದವರು ಭಾಗವಹಿಸಿದ್ದರು. ತಾಯ್ನಾಡಿಗೆ ತೆರಳುತ್ತಿರುವ ಬಳಗದ ಹಿರಿಯರಾದ ಶ್ರೀಮತಿ ಮತ್ತು ಶ್ರೀ ಸಂಧ್ಯಾ ಸತೀಶ ಗಂಜಿಹಾಳ ದಂಪತಿಗೆ ಶಾಲು ಹೊದಿಸಿ ಸನ್ಮಾನಿಸಿ ಬೀಳ್ಕೊಡಲಾಯಿತು. ಅ

***ಈಶ್ವರಲಿಂಗ ಆರೇರ***




# ನವದೆಹಲಿಯಲ್ಲಿ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ

ನಾಡಪ್ರಭು ಕೆಂಪೇಗೌಡ ಫೌಂಡೇಷನ್, ನವದೆಹಲಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಸಹಕಾರದಲ್ಲಿ ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಬೆಂಗಳೂರು ವತಿಯಿಂದ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವವು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಜುಲೈ 28, 2018ರಂದು ವಿಜೃಂಭಣೆಯಾಗಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್‌ಕರ್‌ಡೂಮ್ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ ಅವರು ಕಲೆ ಯಾರ ಸೊತ್ತು ಅಲ್ಲ, ಬಡಮಕ್ಕಳಿಗೆ ವಿದ್ವಾನ್ ಕೋಲಾರ ರಮೇಶ್ ಅವರು ಧಾರೆ ಎಳೆಯುತ್ತಿದ್ದಾರೆ. ಇಂತಹ ಮಹನೀಯರಿಗೆ ನನ್ನ ಆಶೀರ್ವಾದ ಯಾವಾಗಲೂ ಇರುತ್ತದೆ ಎಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ ಮಾಜಿ ಸಚಿವರು ಹಾಗೂ ಶಾಸಕರು ಕರ್ನಾಟಕ ಸರ್ಕಾರ ಶ್ರೀ ಎಚ್. ವಿಶ್ವನಾಥ್ ಅವರು ಮಾತನಾಡುತ್ತಾ ರಾಷ್ಟ್ರದ ರಾಜಧಾನಿಯಲ್ಲಿ 70ಕ್ಕೂ ಹೆಚ್ಚು ಕಲಾವಿದರನ್ನು ಕರೆತಂದು ಕಾರ್ಯಕ್ರಮವನ್ನು ಆಯೋಜಿಸಿ ಎಲ್ಲಾ ಪ್ರಕಾರದ ನೃತ್ಯರೂಪಕಗಳನ್ನು ಉಣಬಡಿಸಿದ ಶ್ರೀ ವಿದ್ವಾನ್ ರಮೇಶ್ ಅವರಿಂದ ಮಾತ್ರ ಸಾಧ್ಯ ಎಂದು ನುಡಿದರು ಮತ್ತು ನಾಡಪ್ರಭು ಕೆಂಪೇಗೌಡ ಅವರು ಬೆಂಗಳೂರೆನ್ನು ಕಟ್ಟಿದರೆ ವಿದ್ವಾನ್ ರಮೇಶ್ ಅವರು ಕಲೆ, ಸಂಸ್ಕೃತಿಯನ್ನು ಜಾತ್ಯಾತೀತ ಮಕ್ಕಳಿಗೆ ಕಲಿಸುತ್ತಿರುವ ಇವರಿಗೆ ನನ್ನ ಶುಭ ಹಾರೈಕೆಗಳು. ಇಂತಹ ಅತ್ಯದ್ಭುತ ಕಾರ್ಯಕ್ರಮವನ್ನು ಮಾಡಲು ಮೂಲ ಕಾರಣಕರ್ತರಾದ ನೀಡಿದ ಶ್ರೀ ಸಿ.ಎಂ. ನಾಗರಾಜ ಪ್ರಧಾನ ಕಾರ್ಯದರ್ಶಿಗಳಿಗೆ ಮತ್ತು ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ಗೆ ಅಭಿನಂದನೆಗಳನ್ನು ಸಲ್ಲಿಸಿದರು.




ಮುಖ್ಯ ಅತಿಥಿಗಳಾಗಿ ಶ್ರೀ ಎಸ್. ರಾಘವೇಂದ್ರ ರಾವ್, ಪ್ರಧಾನ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯ, ಭಾರತ ಸರ್ಕಾರ, ಶ್ರೀ ಸಿದ್ದೇಗೌಡ, ಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ, ಶ್ರೀಮತಿ ಪದ್ಮಾಶೇಖರ್, ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ, ಶ್ರೀ ಚೇತನ್, ಐ.ಎ.ಎಸ್. ಅಧಿಕಾರಿಗಳು, ಶ್ರೀ ಪವನ್ ಕುಮಾರ್, ಐ.ಎ.ಎಸ್., ಅಧಿಕಾರಿಗಳು, ಶ್ರೀ ಪಲ್ಲವಿಮಣಿ, ಅಧ್ಯಕ್ಷರು ಕನ್ನಡ ಸಂಘ, ಬಂಗಾರುಪೇಟೆ ಹಾಗೂ ಕನ್ನಡ ಪ್ರಾಧಿಕಾರದ ಸದಸ್ಯರು, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ, ವಿದ್ವಾನ್ ಶ್ರೀ ಕೋಲಾರ ರಮೇಶ್, ಕಾರ್ಯದರ್ಶಿ ಶ್ರೀ ಪುಷ್ಪಾಂಜಲಿ ನಾಟ್ಯ ಕಲಾ ಅಕಾಡೆಮಿ, ಕೆ.ಆರ್. ಪುರಂ, ಬೆಂಗಳೂರು ಹಾಗೂ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ ಇವರು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಪಲ್ಲವಿಮಣಿ, ಇಂತಹ ಕಾರ್ಯಕ್ರಮ ರಾಷ್ಟ್ರ ರಾಜಧಾನಿಯಲ್ಲಿ ಮಾಡುವ ತಮಗೆ ಶುಭ ಹಾರೈಕೆಗಳು. ರಾಜಧಾನಿಯಲ್ಲಿ ಕೇಂಪೇಗೌಡರ ಹೆಸರಿನಲ್ಲಿ ಪ್ರತೀ ವರ್ಷ ಇಂತಹ ಕಾರ್ಯಕ್ರಮಗಳು ನಡೆಯಬೇಕು ಇದಕ್ಕೆ ನಮ್ಮ ಸಹಕಾರವಿದೆ ಎಂದು ತಿಳಿಸಿದೆ. ಇದೇ ಸಂದರ್ಭದಲ್ಲಿ ನೂತನ ಶಾಸಕರಾದ ಶ್ರೀ ಎಚ್. ವಿಶ್ವನಾಥ್, ಶ್ರೀ ಪಲ್ಲವಿಮಣಿ, ಅಧ್ಯಕ್ಷರು ಕನ್ನಡ ಸಂಘ, ಬಂಗಾರುಪೇಟೆ ಹಾಗೂ ಕನ್ನಡ ಪ್ರಾಧಿಕಾರದ ಸದಸ್ಯರು, ಕರ್ನಾಟಕ ಸರಕಾರ, ನೂತನ ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಚೇತನ್ ಮತ್ತು ಶ್ರೀ ಪವನ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದ ನೃತ್ಯರೂಪಕ– ಕುಮಾರಿ















ರಚನ ಮತ್ತು ತಂಡ, ಹೊಸಕೋಟೆ, ಸಮೂಹ ನೃತ್ಯ–ಶ್ರೀಭೂಮಿಕ ನೃತ್ಯ ಹಾಗೂ ಸಂಗೀತ ಶಾಲೆ, ಕಂಟೆಪರರಿ ನೃತ್ಯ–ವೆಂಕಿ ಸ್ಕೂಲ್ ಆಫ್ ಡಾನ್ಸ್, ಬೆಂಗಳೂರು, ಜಾನಪದ ನೃತ್ಯ–ನಾಟ್ಯಾಂಜಲಿ ನೃತ್ಯಕಲಾ ಅಕಾಡೆಮಿ, ದೊಡ್ಡಸಂದ್ರ, ಕೋಲಾಟ–ಮಧುಶ್ರೀ ಮತ್ತು ತಂಡ, ಬೆಂಗಳೂರು, ಬಳೆಗಾರ ಜಾನಪದ ನೃತ್ಯ–ಶಿವಪ್ಪ ಮತ್ತು ತಂಡ, ನವದೆಹಲಿ, ಭರತನಾಟ್ಯ–ಸಂಜೀವಿನಿ ನೃತ್ಯಶಾಲೆ, ಬೆಂಗಳೂರು, ನೃತ್ಯ ವೈಭವ–ಹರ್ಷಿತ ಕೊಕ್ಕಡ, ಸಪ್ನಾ ಅತ್ತಾವರ, ಪ್ರೇರಣಾ ರಾವ್, ಕನಿಕಾ ಭಟ್, ನವದೆಹಲಿ, ಸ್ನೇಹಾ ಚಂದ್ರಶೇಖರ್, ಗುರ್‌ಗಾಂವ್ ಹಾಗೂ ಮಾರ್ಷಲ್ ಆರ್ಟ್–ರಾಜೇಶ್ ಸಾಯಿಬಾಬು, ನವದೆಹಲಿ ಇವರ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕನ್ನಡಿಗರ ಮನಸೂರೆಗೊಂಡಿತು.

ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

*ಸಿ.ಎಂ. ನಾಗರಾಜ*






# ದೆಹಲಿ ಒಕ್ಕಲಿಗ ಗೌಡ ಸಂಘದ ವತಿಯಿಂದ ಕರ್ನಾಟಕ ಯುವ ಸಬಲೀಕರಣ ಕಾರ್ಯಕ್ರಮ





ದೆಹಲಿ ಒಕ್ಕಲಿಗ ಗೌಡ ಸಂಘವು ಇದೇ ಜುಲೈ 22ರಂದು ನವದೆಹಲಿಯ ಆಗಸ್ಟ್ ಕ್ರಾಂತಿಮಾರ್ಗದಲ್ಲಿರುವ ಎನ್.ಸಿ.ಯು.ಐ. ಸಭಾಂಗಣದಲ್ಲಿ ಕರ್ನಾಟಕ ಯುವ ಸಬಲೀಕರಣ ಹಾಗೂ ಸಮುದಾಯದ ನೂತನ ರಾಜ್ಯಸಭಾ ಸದಸ್ಯರುಗಳಿಗೆ ಮತ್ತು 2018ರ ವಿಧಾನಸಭೆಗೆ ನೂತನವಾಗಿ ಆಯ್ಕೆಯಾದ ಶಾಸಕರುಗಳಿಗೆ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಮುದಾಯದ ಮಹಿಳೆಯರ ಸೊಗಸಾದ ಕಳಸಯಾತ್ರೆ ಮತ್ತು ಕರುನಾಡಿನಿಂದ ಆಗಮಿಸಿದ್ದ ತಮಟೆ, ನಗಾರಿ ವಾದ್ಯ, ಪೂಜಾಕುಣಿತ, ಡೊಳ್ಳುಕುಣಿತ, ಹಾಲಕ್ಕಿ ನೃತ್ಯಗಳ ಸಂಭ್ರಮದೊಂದಿಗೆ ಪರಮಪೂಜ್ಯರುಗಳನ್ನು ಮತ್ತು ಎಲ್ಲಾ ಅತಿಥಿಗಳನ್ನು ವಿಜೃಂಭಣೆಯಿಂದ ಸಭಾಂಗಣಕ್ಕೆ ಬರಮಾಡಿಕೊಳ್ಳಲಾಯಿತು.

ಈ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನಮಠದ ಪೀಠಾಧ್ಯಕ್ಷರಾದ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಮತ್ತು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಕುಮಾರ ಚಂದ್ರಶೇಖರನಾಥ ಮಹಾ ಸ್ವಾಮೀಜಿ ಮತ್ತು ಸ್ಪಟಿಕಾಪುರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಂಜಾವಧೂತ ಮಹಾಸ್ವಾಮೀಜಿಗಳು ಅಲಂಕರಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಮಾಜಿ ಪ್ರಧಾನಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರು ಅವರು ದೀಪ ಪ್ರಜ್ವಲಿಸುವ ಮುಖಾಂತರ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಶ್ರೀ ಇ.ಸಿ. ವಿದ್ಯಾಸಾಗರ್ ಅವರು ವಹಿಸಿದ್ದರು. ಕರ್ನಾಟಕ ಯುವ ಸಬಲೀಕರಣದ ವಿಸ್ತಾರವಾದ ನುಡಿಗಳನ್ನು ಶ್ರೀ ಮುರಳೀಧರ ಹಾಲಪ್ಪರವರು ಸಭೆಗೆ ಮಂಡಿಸಿದರು. ಈ ವೇದಿಕೆಯಲ್ಲಿ ಕನ್ನಡದವರೇ ಆದ ಹಿರಿಯ ನ್ಯಾಯಾಧೀಶರಾದ ಶ್ರೀ ಎ.ಎಸ್. ಜಯಚಂದ್ರ ಹಾಗೂ ಹರಿಯಾಣ ರಾಜಸ್ಥಾನ ಉತ್ತರಪ್ರದೇಶ ಪ್ರಾಂತ್ಯಗಳಿಂದ ಆಗಮಿಸಿದ್ದ ಜಾಟ್ ಮಹಾಸಭಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಪರಮಪೂಜ್ಯರುಗಳನ್ನು ಮತ್ತು ಗಣ್ಯಾತಿಗಣ್ಯ ಅತಿಥಿಗಳನ್ನು ಮತ್ತು ಸಭಾಂಗಣದಲ್ಲಿ ಹಾಜರಿದ್ದ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳನ್ನು ಮತ್ತು ದೆಹಲಿಯ ಇತರ ಕನ್ನಡಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಮತ್ತು ದೆಹಲಿಯ ಮೂಲೆ ಮೂಲೆಗಳಿಂದ ಆಗಮಿಸಿದ್ದ ಎಲ್ಲಾ ಕನ್ನಡಿಗರನ್ನು ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಎ.ಟಿ. ಶ್ರೀನಿವಾಸ್‌ರವರು ಸ್ವಾಗತಿಸಿದರು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ನೂತನ ಶಾಸಕರುಗಳನ್ನು ಪರಮಪೂಜ್ಯರುಗಳಿಂದ ಅಭಿನಂದಿಸಲಾಯಿತು ಮತ್ತು ವಿವಿಧ ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧನೆಗೈದ ಹಲವಾರು ಸಾಧಕರುಗಳಿಗೆ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ನೆರೆದಿದ್ದ ಎಲ್ಲಾ ಪ್ರೀತಿಯ ಕನ್ನಡಿಗರಿಗೆ ಜನಪದ ತಂಡದವರು ಜನಪದ ಗೀತೆಗಳ ರಸದೌತಣ ನೀಡಿ ಮೆಚ್ಚುಗೆ ಪಡೆದರು. ಪರಮಪೂಜ್ಯರುಗಳ ಆಶೀರ್ವಚನದೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯ ಮಾಡಲಾಯಿತು ಈ ಕಾರ್ಯಕ್ರಮಕ್ಕಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶ್ರಮಿಸಿದವರೆಲ್ಲರಿಗೂ ಸಂಘದ ಕಾರ್ಯದರ್ಶಿ ಪ್ರಶಾಂತ್ ಕುಮಾರ್ ಬಿ.ಆರ್. ಅವರು ಧನ್ಯವಾದ ಅರ್ಪಿಸಿದರು. ಕರುನಾಡಿನಿಂದಲೇ ಬಂದ ನಳಪಾಕರಿಂದ ಕರ್ನಾಟಕ ಶೈಲಿಯಲ್ಲೇ ಕಾರ್ಯಕ್ರಮದ ರಾತ್ರಿ ಭೋಜನವನ್ನು ಏರ್ಪಡಿಸಲಾಗಿತ್ತು ಅ

*ಪ್ರಶಾಂತ್ ಕುಮಾರ್ ಬಿ.ಆರ್.*

# ಕಲಾಂ ಜೀವನ ಧರ್ಮ ಪುಸ್ತಕ ಬಿಡುಗಡೆ




ಜನ ಸಾಮಾನ್ಯರ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಸಂಸ್ಮರಣೆ–ಅಂಗವಾಗಿ ಡಾ. ಜಯಪ್ರಕಾಶ್ ಪುತ್ತೂರು ಅವರ "ಕಲಾಂ ಜೀವನ ಧರ್ಮ" ಪುಸ್ತಕವು ಇತ್ತೀಚೆಗೆ ಮೈಸೂರಿನಲ್ಲಿ ಮೈಸೂರಿನ ಪೋಲಿಸ್ ಆಯುಕ್ತರಾದ ಡಾ. ಎ. ಸುಬ್ರಹ್ಮಣ್ಯೇಶ್ವರ ರಾವ್ ಅವರು ಬಿಡುಗಡೆಗೊಳಿಸಿದರು. ಈ ಪುಸ್ತಕದಲ್ಲಿ ಭಾರತದ ಮಾಜಿ ರಾಷ್ಟ್ರಪತಿ ಡಾ ಕಲಾಂ ಅವರ ಮಾನವ ಆಸಕ್ತಿ ಕಥೆಗಳನ್ನು ಒಳಗೊಂಡಿದೆ. ಪ್ರಸಿದ್ಧ ಕನ್ನಡ ವಿಮರ್ಶಕ ಮತ್ತು ಬರಹಗಾರರಾದ ಶ್ರೀ ಎಸ್.ಆರ್. ವಿಜಯಶಂಕರ್ ಅವರು ಅಧ್ಯಕ್ಷತೆ ವಹಿಸಿದ್ದರು. ವಿದ್ವಾಂಸರಾದ ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್ ಅವರು ಕೃತಿ ಅವಲೋಕನ ಮಾಡಿದರು. ಅ

***ಅಭಿಮತ ವರದಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Aug-2018, Vol. No.28, Issue No.11, Price Rs.1/-
RNI Regn. No. 53405/91, DL-SW-1/4016/16-18
Date of Publication : Aug 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ
ಶ್ರೀಮತಿ ಜಯಮಾಲ ಅವರೊಂದಿಗೆ ಸಂಘದ
ಪದಾಧಿಕಾರಿಗಳು ಸಮಾಲೋಚನೆಯಲ್ಲಿ




ಭಾರತೀಯ ಶಾಸ್ತ್ರೀಯ ನೃತ್ಯ ಸಂಗಮ–2018
ಕಾರ್ಯಕ್ರಮ ನೀಡಿದ ಕಲಾವಿದರನ್ನು ಸಚಿವೆ ಶ್ರೀಮತಿ
ಜಯಮಾಲ ಅವರು ಅಭಿನಂದಿಸಿ ಮಾತನಾಡುತ್ತಿರುವುದು